Motion of thanks to the Governor's Address

(Debate continued)

† ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು 2).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸೂಚಿಸಲು ಮಾನ್ಯ ಸದಸ್ಯರಾದ ಬೊಮ್ಮಾಯಿ ಅವರು ಮಂಡಿಸಿರುವ ಗೊತ್ತುವಳಿಯನ್ನು ಅನುಮೋದಿಸುತ್ತ ನಾಲ್ಕು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಒಂದು ದೇಶ ಅಥವಾ ರಾಜ್ಯ ಪ್ರಜಾಪ್ರಭುತ್ವದಲ್ಲಿ ಬೆಳೆದು ಬರಬೇಕಾದರೆ ಮೂರು ಕಾರ್ಯಗಳು ಬಹು ಮುಖ್ಯ. ಒಂದು ಆಹಾರ ಮತ್ತೊಂದು ವಸತಿ ಮೂರನೆಯದು ವಿದ್ಯೆ. ಈ ಮೂರರಲ್ಲಿ ಪರಿಪೂರ್ಣತೆಯನ್ನು ಹೊಂದದೆ ಹೋದರೆ ಯಾವುದೇ ರಾಜ್ಯವಾಗಲೀ, ಯಾವುದೇ ದೇಶವಾಗಲೀ ಪ್ರಗತಿ ಪಥದಲ್ಲಿ ಮುಂದುವರಿಯಲಿಕ್ಕೆ ಸಾಧ್ಯವಿಲ್ಲ ಎಂದು ತಿಳಿದವರು ಅಭಿಪ್ರಾಯಪಡುತ್ತಾರೆ. ಈ ದೃಷ್ಟಿಯಿಂದ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಆಹಾರದ ಬಗ್ಗೆ ಹೇಳುತ್ತ ಆಹಾರದಲ್ಲಿ ನಾವು ಸ್ವಯಂಪೂರ್ಣತೆಗೆ ಬರುತ್ತಿದ್ದೇವೆಂದು ಹೇಳಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಕಳೆದ ಎರಡು ಮೂರು ವರ್ಷಗಳಿಂದ ನಮ್ಮಲ್ಲಿ ಆಹಾರದ ಉತ್ಪತ್ತಿ ಜಾಸ್ತಿಯಾಗಿ ಆಹಾರದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಒಳ್ಳೆಯ ರೀತಿಯಲ್ಲಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಸಂದರ್ಭದಲ್ಲಿ ನಿಯಂತ್ರಣ ಮತ್ತು ವಲಯ ಪದ್ಧತಿ, ಬೆಲ್ಟ್ ಏರಿಯಾ ಇವನ್ನು ತೆಗೆಯದೆ ಇರುವುದು ಏಕೆ ಎನ್ನುವುದು ಅರ್ಥವಾಗಿಲ್ಲ. ಆಹಾರದಲ್ಲಿ ಉಳಿತಾಯ ಹೊಂದಿ ಪ್ರಗತಿದಾಯಕವಾಗಿ ಮುಂದೆ ಬಂದಿರುವಾಗ ವಲಯ ಪದ್ಧತಿಯನ್ನು ತೆಗೆಯಬೇಕಾಗಿತ್ತು. ವಲಯ ಪದ್ಧತಿ ಮತ್ತು ಬೆಲ್ಟ್ ಏರಿಯಾದಿಂದ ಏನಾಗಿದೆ ಎಂದರೆ, ದಕ್ಷಿಣಕನ್ನಡ ಜಿಲ್ಲೆಯಿಂದ ಕೇರಳ ರಾಜ್ಯಕ್ಕೆ ಅಕ್ಕಿ ಹೋಗಲು ಸಾಧ್ಯವಿಲ್ಲ. ಇದರಿಂದಾಗಿ ಅಲ್ಲಿ ಕಳ್ಳಸಂತೆ ಬಹಳ ಜೋರಾಗಿದೆ. ವಲಯಪದ್ಧತಿಯನ್ನು ಬೆಲ್ಟ್ ಏರಿಯಾ ಇರುವುದನ್ನು ತೆಗೆದರೆ ಆಹಾರ ಆಚೆಗೆ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಕೇರಳದವರೂ ಇದೇ ದೇಶದವರು, ನಾವು ಒಂದು ಕೆ.ಜಿ.ಗೆ ಒಂದು ರೂಪಾಯಿ ಪ್ರಕಾರ ಕೊಡುವಾಗ ಅವರು ಒಂದು ಕೆ.ಜಿ.ಗೆ ಎರಡು ಮೂರು ರೂಪಾಯಿ ಕೊಡಬೇಕಾಗುವುದು ಸರಿಯಲ್ಲ. ಈ ರೀತಿ ಇರುವುದು ಒಳ್ಳೆಯದಲ್ಲ. ಆದುದರಿಂದ ವಲಯ ಪದ್ಧತಿ, ಬೆಲ್ಟ್ ಏರಿಯಾ ತೆಗೆಯಬೇಕೆಂದೂ, ಇದಕ್ಕೆ ಸರ್ಕಾರ ಗಮನ ಕೊಡಬೇಕೆಂದೂ ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ.

ವಸತಿ ವಿಚಾರ. ವಸತಿಯೂ ಬಹಳ ಪ್ರಾಮುಖ್ಯವಾದುದು. ಗೃಹಗಳನ್ನು ನಿರ್ಮಿಸುವ ವಿಚಾರದಲ್ಲಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸೂಚಿಸಿದ್ದಾರೆ. ಪ್ರಸಕ್ತ ವರ್ಷದಲ್ಲಿ 6 ಕೋಟಿ ರೂಪಾಯಿಗಳನ್ನು ಚಂದಾ ಎತ್ತಲು ಗೃಹನಿರ್ಮಾಣ ಮಂಡಲಿಗೆ ಅನುಮತಿ ಕೊಡಲಾಗಿತ್ತು ಎಂದು ಹೇಳಿದ್ದಾರೆ. ಎಲ್ಲ ಪಟ್ಟಣಗಳಲ್ಲಿಯೂ ಗೃಹಗಳ ಕೊರತೆ ಇದೆ. ಮಂಗಳೂರಿನಲ್ಲಿ ಗೃಹಗಳ ಕೊರತೆಯಿಂದಾಗಿ ಜನ ಪೇಚಾಡುತ್ತಿದ್ದಾರೆ. ಹೀಗಿದ್ದರೂ ಗೃಹನಿರ್ಮಾಣ ಮಂಡಲಿಯವರು ಮಂಗಳೂರಿನಲ್ಲಿ ಏಕೆ ಇಂಥ ಗೃಹಗಳನ್ನು ನಿರ್ಮಾಣ ಮಾಡಲಿಲ್ಲ ಎಂದು ಕೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಬೆಂಗಳೂರು ಬಿಟ್ಟರೆ ಮಂಗಳೂರು ಪ್ರಾಮುಖ್ಯವಾದ ಸ್ಥಳ. ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆ ಪ್ರಾಮುಖ್ಯವಾದ ಜಿಲ್ಲೆ. ಇಂಥ ಕಡೆ ಗೃಹನಿರ್ಮಾಣ ಕಾರ್ಯಕ್ರಮವನ್ನು ಏಕೆ ತೆಗೆದುಕೊಂಡಿಲ್ಲ ಎಂದು ಕೇಳಬಯಸುತ್ತೇನೆ.

ಎಲ್ಲಕ್ಕಿಂತ ಪ್ರಾಮುಖ್ಯವಾದ ವಿಷಯವೆಂದರೆ ಮೀನುಗಾರಿಕೆ. ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಅಷ್ಟೊಂದು ಪ್ರಸ್ತಾಪ ಮಾಡಿಲ್ಲವೆಂದು ನಾನು ಭಾವಿಸುತ್ತೇನೆ. ಧರ್ಮಾರ್ಥವಾಗಿ, ನೈಸರ್ಗಿಕವಾಗಿ ಸಿಕ್ಕುವ, ದೇವರು ಕೊಡತಕ್ಕ ಸಂಪತ್ತು, ಎಂದರೆ ಮೀನು ಕರಾವಳಿಯಲ್ಲಿ ಹೆಚ್ಚಾಗಿ ಸಿಕ್ಕುತ್ತದೆ. ಧರ್ಮಾರ್ಥವಾಗಿ ಸಿಕ್ಕತಕ್ಕ ಮೀನನ್ನು ಹಿಡಿದರೆ ನಮ್ಮ ಆಹಾರದ ಕೊರತೆಯನ್ನು ನೀಗುವುದರ ಜೊತೆಗೆ ಕನ್ನಡ ರಾಜ್ಯಕ್ಕೆ ಇರತಕ್ಕ ಹಣದ ಕೊರತೆಯನ್ನು ಕೂಡ ಸರಿಪಡಿಸುವುದಕ್ಕೆ ಅವಕಾಶವಿರುವಾಗ ಅದಕ್ಕಾಗಿ ಈಗ ಮಾಡಿರತಕ್ಕ ಸಹಾಯ ಬಹಳ ಕಡಮೆ ಎಂದು ಹೇಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ 150 ದೋಣಿಗಳನ್ನು ಮಾತ್ರ ಕೊಡುವ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಮತ್ತು 57 ಅಡಿ ಉದ್ದದ ಎರಡು ಉಕ್ಕಿನ ಟ್ರಾಲರುಗಳನ್ನು ಬಳಸಿಕೊಳ್ಳಲಾಗುವುದು ಎಂದು ಸೂಚಿಸಿದ್ದಾರೆ. ಇದು ಸಾಲದು. 500–600 ದೋಣಿಗಳನ್ನಾದರೂ ಸೇರಿಸಿಕೊಂಡರೆ ಹೆಚ್ಚು ಮೀನು ಸಂಗ್ರಹಿಸುವುದಕ್ಕೆ ಸಾಧ್ಯವುಂಟು. ಕಳೆದ ತಿಂಗಳಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರು ಕೋಟಿ ರೂಪಾಯಿ ಬೆಲೆಯ ಮೀನು ಸಿಕ್ಕಿದೆ ಎಂದು ಹೇಳುವಾಗ ಸಮುದ್ರದಲ್ಲಿ ಧಾರಾಳವಾಗಿ ದೇವರು ಕೊಡತಕ್ಕ ಈ ಸಂಪತ್ತನ್ನು ಪಡೆದುಕೊಳ್ಳುವುದಕ್ಕೆ ಹೆಚ್ಚು ಗಮನ ಕೊಡದೆ ಇದ್ದರೆ, ಇರತಕ್ಕ ಸಂಪತ್ತನ್ನು ನಾವು ಬಳಸಿಕೊಳ್ಳುವುದಾದರೂ ಹೇಗೆ ? ಆದುದ

ರಿಂದ ಮೀನುಗಾರಿಕೆಗೆ ಹೆಚ್ಚು ಗಮನ ಕೊಡಬೇಕು. ಇದರಿಂದ ಒಂದು ದೃಷ್ಟಿಯಲ್ಲಿ ಆಹಾರದ ಕೊರತೆಯೂ ನಿವಾರಣೆಯಾಗುತ್ತದೆ.

ವಿದ್ಯುಚ್ಛಕ್ತಿ ಮತ್ತು ನೀರಾವರಿ ವಿಷಯಗಳ ಬಗ್ಗೆ ಹೇಳುವುದಾದರೂ ಕೂಡ, ವಿದ್ಯುಚ್ಛಕ್ತಿ ಎಲ್ಲ ಕಡೆಗಳಿಗೂ ಕೊಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯನ್ನು ಬಳಸತಕ್ಕ ಸಂದರ್ಭಗಳನ್ನು ಒದಗಿಸಿಕೊಡಬೇಕು. ದಕ್ಷಿಣ ಕನ್ನಡ ಜಿಲ್ಲೆಯ ವಿಚಾರವನ್ನು ಹೇಳುವುದಾದರೆ ಅಲ್ಲಿ ದೊಡ್ಡ ನೀರಾವರಿಗಳು ಯಾವುವೂ ಇಲ್ಲ. ಸಣ್ಣ ನೀರಾವರಿಯನ್ನು ಮಾಡಬೇಕಾಗಿದೆ ಅಥವಾ ಪಂಪುಸೆಟ್‌ಗಳ ಮೂಲಕ ಕೃಷಿ ಉತ್ಪನ್ನ ಮಾಡಬೇಕಾಗಿದೆ. ಈಚಿನ ಎರಡು ವರ್ಷಗಳಲ್ಲಿ ಕೃಷಿ ಉತ್ಪನ್ನ ಜಾಸ್ತಿಯಾಗಿ ಆಹಾರದಲ್ಲಿ ಸ್ವಾವಲಂಬನೆಯಾಗುತ್ತಿದೆ. ಪಂಪ್‌ಸೆಟ್‌ಗಳನ್ನು ಹೆಚ್ಚು ಹೆಚ್ಚು ಕೊಟ್ಟಿರುವುದರಿಂದ ಈ ಪರಿಸ್ಥಿತಿಗೆ ಬಂದಿದೆ ಎಂದು ಹೇಳುತ್ತೇನೆ. 1965ನೇ ಇಸವಿಯಲ್ಲಿ ಕಮ್ಯೂನಿಸ್ಟರು ಮತ್ತು ಪಾಕಿಸ್ತಾನದವರು ಈ ದೇಶದ ಮೇಲೆ ಯುದ್ಧಹೂಡಿದಾಗ, ಆಹಾರದ ಕೊರತೆ ಬಂದಾಗ, ಇಡೀ ದೇಶದಲ್ಲಿ ಹಾಹಾಕಾರವೆದ್ದಾಗ, ದೇಶದಲ್ಲಿ ಹೆಚ್ಚು ಆಹಾರ ಬೆಳೆಸಬೇಕು, ಪಂಪ್‌ಸೆಟ್ ಮತ್ತು ವಿದ್ಯುತ್ತನ್ನು ಕೊಟ್ಟು ಸಣ್ಣ ನೀರಾವರಿಯನ್ನು ಹೆಚ್ಚು ಮಾಡಬೇಕು ಎನ್ನುವ ಅಭಿಪ್ರಾಯ ಬಂತು. ತದನಂತರ ವರ್ಷಗಳಲ್ಲಿ ವಿದ್ಯುಚ್ಛಕ್ತಿ ಮತ್ತು ಪಂಪ್‌ಸೆಟ್‌ಗಳನ್ನು ಕೂಡ ಲಕ್ಷ್ಯ ಕೊಡಲು ಶುರುವಾಯಿತು. ಅದರ ಫಲವಾಗಿ ಆಹಾರದ ಉತ್ಪತ್ತಿ ಜಾಸ್ತಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಪಂಪ್‌ಸೆಟ್‌ಗಳನ್ನು ಇನ್ನೂ ಹೆಚ್ಚಾಗಿ ಕೊಡಬೇಕು. ಅಲ್ಲಿ 120 ಅಂಗುಲ ಮಳೆಯಾದರೂ ಬಿದ್ದ ನೀರೆಲ್ಲಾ ಸಮುದ್ರಕ್ಕೆ ಹರಿದು ಹೋಗುತ್ತದೆ. ಈ ನೀರನ್ನು ದೊಡ್ಡ ನೀರಾವರಿ ಯೋಜನೆಗಳ ಮೂಲಕ ಪಡೆದುಕೊಳ್ಳುವುದಕ್ಕೆ ಅಲ್ಲಿ ಆಗುವುದಿಲ್ಲ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ವಿದ್ಯುತ್ತನ್ನು ಕೊಟ್ಟು, ಪಂಪ್‌ಸೆಟ್‌ಗಳನ್ನು ಕೊಟ್ಟು ಧರ್ಮಾರ್ಥವಾಗಿ ಸಮುದ್ರಕ್ಕೆ ಹೋಗುವ ನೀರನ್ನು ಬಳಸಿಕೊಳ್ಳತಕ್ಕ ಬುದ್ಧಿವಂತಿಕೆಯನ್ನು ಸರ್ಕಾರ ಆದಷ್ಟು ಶೀಘ್ರವಾಗಿ ಮಾಡಿ ಹಸಿರು ಕ್ರಾಂತಿಯನ್ನುಂಟುಮಾಡಿ, ಕೃಷಿ ಉತ್ಪತ್ತಿಯನ್ನು ಹೆಚ್ಚುಮಾಡಿದರೆ ಆಹಾರದಲ್ಲಿ ಸ್ವಾವಲಂಬನೆಯುಂಟಾಗುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ವಿದ್ಯೆ ಬಹಳ ಪ್ರಾಮುಖ್ಯವಾದ ವಿಚಾರ. ವಿದ್ಯಾ ಪದ್ಧತಿಯಲ್ಲಿ ಬದಲಾವಣೆಯಾಗಬೇಕು. ಈ ದೇಶದಲ್ಲಿ ವಿದ್ಯಾರ್ಥಿಗಳು, ನಮ್ಮ ತರುಣರು ಬುದ್ಧಿವಂತರಾಗಬೇಕಾದರೆ ಈ ದೇಶದಲ್ಲಿರುವ ವಿದ್ಯಾ ಪದ್ಧತಿ ಬದಲಾವಣೆಯಾಗದೆ ಇದ್ದರೆ ದೇಶದ ಪ್ರಗತಿಯಾಗುವುದು ಕಷ್ಟ. ಆದುದರಿಂದ ಪಠ್ಯಪುಸ್ತಕಗಳಲ್ಲಿ ದೇಶಾಭಿಮಾನವನ್ನು ರಾಷ್ಟ್ರಪ್ರೇಮವನ್ನು ಉಕ್ಕಿಸುವಂಥ ವಿಚಾರಗಳಿರಬೇಕು. ಅದೇ ರೀತಿಯಲ್ಲಿ ನೈತಿಕ ಮಟ್ಟವನ್ನು ಹೆಚ್ಚಿಸತಕ್ಕ, ನೈತಿಕ ಮಟ್ಟ ಉಳಿಯತಕ್ಕ, ಜಾತ್ಯಾತೀತ ಭಾವನೆಯನ್ನು ಮೇಲಕ್ಕೆ ಎತ್ತಿ ಹಿಡಿಯುವಂಥ ವಿಚಾರಗಳನ್ನು ಬೋಧನೆ ಮಾಡದೆ ಹೋದರೆ ಈ ದೇಶ ಉಳಿಯುವುದಿಲ್ಲ. ಇದು ನಿಜವಾದ ಮಾತು ಎಂದು ತಜ್ಞರು ಹೇಳಿದ್ದಾರೆ. ಆದ್ದರಿಂದ ನಮ್ಮ ವಿದ್ಯಾ ಪದ್ಧತಿಯಲ್ಲಿ ಬದಲಾವಣೆ ಮಾಡಬೇಕು. ಈ ವಿಚಾರವನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕಾಣುವುದಿಲ್ಲ. ಪ್ರಜಾಪ್ರಭುತ್ವ ತತ್ವಗಳನ್ನು ಆಚರಣೆಯಲ್ಲಿ ತಂದಿರುವ ಈ ರಾಷ್ಟ್ರದಲ್ಲಿ ಜಾತ್ಯಾತೀತ ಭಾವನೆಯನ್ನು, ಸಮಾಜವಾದವನ್ನು ಬೋಧಿಸಿ ನೈತಿಕ ಮಟ್ಟವನ್ನು, ರಾಷ್ಟ್ರಪ್ರೇಮವನ್ನು ಹೆಚ್ಚಿಸುವಂಥ ವಿಷಯಗಳನ್ನು ನಮ್ಮ ವಿದ್ಯಾರ್ಥಿಗಳಿಗೆ ಬೋಧಿಸಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ.

ಕಲೆಗಾರರ ಬಗ್ಗೆ, ಸಾಹಿತಿಗಳ ಬಗ್ಗೆ ಮತ್ತು ಪತ್ರಿಕೆಗಳ ಬಗ್ಗೆ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಅಷ್ಟೊಂದು ಉಲ್ಲೇಖವಿಲ್ಲ. ಕಲೆಗಾರರು ಮತ್ತು ಸಾಹಿತಿಗಳು ಮತ್ತು ಪತ್ರಿಕೆಗಳಿಂದ ಈ ದೇಶ ಮುಂದುವರಿಯುತ್ತಿದೆ. ದೇಶವನ್ನು ಪ್ರಗತಿ ಪಥದಲ್ಲಿ ಒಯ್ಯತಕ್ಕ ಮತ್ತು ಜನತೆಗೆ ಜಡ ಬಂದಾಗ ಅವರನ್ನು ಎಚ್ಚರಿಸಿ ಜಾಗ್ರತಿಗೊಳಿಸತಕ್ಕ ಜನರು ಕಲೆಗಾರರು ಸಾಹಿತಿಗಳು ಅಂಥವರಿಗೆ ಪ್ರೋತ್ಸಾಹ ಕೊಡಬೇಕು. ಕವಿತೆ ಮುಂತಾದುವನ್ನು ಬರೆದು ಅವರು ಈ ದೇಶಕ್ಕಾಗಿ ದುಡಿಯುತ್ತಿದ್ದಾರೆ; ಈ ದೇಶದ ಜನತೆಗಾಗಿ ದುಡಿಯುತ್ತಿದ್ದಾರೆ, ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕೆ ದುಡಿಯುತ್ತಿದ್ದಾರೆ, ಜಾತ್ಯಾತೀತ ರಾಷ್ಟ್ರವನ್ನು ಬೆಳೆಸುವುದಕ್ಕೆ ದುಡಿಯುತ್ತಿದ್ದಾರೆ. ಆದ್ದರಿಂದ ಕಲೆಗಾರರಿಗೆ ಮತ್ತು ಸಾಹಿತಿಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಸರ್ಕಾರ ಕೊಡಬೇಕೆಂದು ಈ ಸಂದರ್ಭದಲ್ಲಿ ನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಪತ್ರಿಕೆಗಳು ಕೂಡ ಬಹಳ ಪ್ರಾಮುಖ್ಯ ಪಾತ್ರವನ್ನು ವಹಿಸುತ್ತಿವೆ. ನಮ್ಮಲ್ಲಿ ಹೆಚ್ಚು ಹೆಚ್ಚು ಸಣ್ಣ ಪತ್ರಿಕೆಗಳು ಬೆಳೆಯಬೇಕು. ಅದಕ್ಕೆ ಸಾಕಷ್ಟು ಆಸ್ಪದ ಕೊಡಬೇಕು. ಪತ್ರಿಕೆಗಳು ಉಳಿದರೆ, ಪತ್ರಿಕೆಗಳು ಬೆಳೆದರೆ ದೇಶದ ಜನತೆ ಅವುಗಳನ್ನು ಓದಿ ತಮ್ಮ ಬುದ್ಧಿವಂತಿಕೆಯನ್ನು ಬೆಳೆಸಿಕೊಂಡು ಯಾವ ಮಾರ್ಗದಲ್ಲಿ ಹೋಗಬೇಕು, ಯಾವ ರೀತಿಯಲ್ಲಿ ಪ್ರಗತಿದಾಯಕವಾಗಿ ನಡೆಯಬೇಕು ಎಂದು ಕಂಡುಕೊಳ್ಳುವುದಕ್ಕೆ ಸಾಧ್ಯ. ಇದನ್ನು ಕೂಡ ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

(ಶ್ರೀ ಬಿ. ಎಂ. ಇದಿನಬ್ಬ)

ಇನ್ನು ಸಂಚಾರ ವ್ಯವಸ್ಥೆ ವಿಚಾರದಲ್ಲಿ ರೂರಲ್ ಕಮ್ಯುನಿಕೇಷನ್ ರೋಡ್ಸ್ ನೋಡಿಕೊಳ್ಳುವವರು ಯಾರೂ ಇಲ್ಲ. ಕೆಲವು ರಸ್ತೆಗಳ ಕೆಲಸ ಪೂರ್ತಿಯಾಗಿಲ್ಲ. ಕೆಲವು ಕಡೆ ಸೇತುವೆ ನಿರ್ಮಾಣವಾಗಬೇಕಾಗಿದೆ. ಹಳ್ಳಿಗಳಿಗೆ ಹೋಗುವುದಕ್ಕೆ ರಸ್ತೆ ಕೆಲಸ ಸರಿಯಾಗಿ ಆಗದೇ ಸೇತುವೆಗಳು ಇಲ್ಲದೇ ಜನರಿಗೆ ಬಹಳ ಕಷ್ಟವಾಗಿದೆ. ರಸ್ತೆ ಸೌಕರ್ಯ ಒದಗಿಸಿಕೊಡಬೇಕಾದುದು ಲೋಕೋಪಯೋಗಿ ಇಲಾಖೆಯ ಆದ್ಯ ಕರ್ತವ್ಯ. ಸಂಚಾರ ಮಾರ್ಗದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದು ಕಂಡು ಬರುವುದಿಲ್ಲ. ಸರಕಾರದವರು ಇದಕ್ಕೆ ಆದ್ಯ ಗಮನ ಕೊಟ್ಟು ಗ್ರಾಮಾಂತರ ಪ್ರದೇಶದ ಮಾರ್ಗಗಳನ್ನು ಆದಷ್ಟು ಶೀಘ್ರವಾಗಿ ಮಾಡಿಕೊಡಬೇಕು ಎಂದು ಸಲಹೆ ಮಾಡುತ್ತೇನೆ. ಈ ಕೆಲಸಕ್ಕೆ ಹಣ ಇಲ್ಲ ಎಂದು ನೆಪ ಹೇಳಬಾರದು. ಇದಕ್ಕೆ ಹಣ ಒದಗಿಸಬೇಕು.

ಈಗ ಮಂಗಳೂರು ಬಂದರು ವಿಷಯ ಹೇಳುವುದಿಲ್ಲ. ಸಂದರ್ಭ ಬಂದಾಗ ಅದನ್ನು ಹೇಳುತ್ತೇನೆ.

ಭೂಸುಧಾರಣೆ ಕಾನೂನು ಬೇಗನೇ ಜಾರಿಗೆ ತರಬೇಕು. ಸಣ್ಣ ಸಣ್ಣ ಹಿಡುವಳಿದಾರರಿಗೆ ನ್ಯಾಯ ದೊರೆಯುವಂತೆ ಆಗಬೇಕು. ಬೇರೆ ರಾಜ್ಯಗಳಲ್ಲಿ ಭೂಸುಧಾರಣೆ ಕಾನೂನು ಜಾರಿಗೆ ತಂದಿರುವುದಕ್ಕಿಂತಲೂ ಒಳ್ಳೇ ರೀತಿಯಲ್ಲಿ ತಂದು ಬಡ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳಲು ಅಪೇಕ್ಷೆ ಪಡುತ್ತೇನೆ.

ಸಹಕಾರ ಸಂಘಗಳ ಬಗ್ಗೆ ಒಂದು ಮಾತು ಹೇಳಲು ಅಪೇಕ್ಷೆ ಪಡುತ್ತೇನೆ. ಯಾವ ಸಹಕಾರ ಸಂಘದಲ್ಲಿಯೂ ಮೂರು ವರ್ಷಗಳ ನಂತರ ಡೈರೆಕ್ಟರ್ ಆಗುವುದಕ್ಕೆ ಅವಕಾಶ ಇರಬಾರದು. ಪಟ್ಟಭದ್ರ ಹಿತ ಉಳಿಯದಂತೆ ಮಾಡಿದರೆ ಸಹಕಾರ ಕ್ಷೇತ್ರ ಉಳಿಯುತ್ತದೆ. ಇದಕ್ಕೆ ಹಣ ಖರ್ಚು ಮಾಡಿದ್ದು ಉಪಯೋಗವಾಗುತ್ತದೆ.

ಸರಕಾರಿ ನೌಕರರ ಸಂಬಳ ಸಾರಿಗೆ ವಿಚಾರದಲ್ಲಿ ತುಕೋಳ್ ಕಮಿಷನ್ ವರದಿ ಜಾರಿ ಮಾಡಿದ್ದು ಒಳ್ಳೆಯದು. ಸರಕಾರಿ ನೌಕರರ ಬಗ್ಗೆ ಅನುಕಂಪ ಇದ್ದರೆ ಒಳ್ಳೇ ರೀತಿಯಿಂದ ಕೆಲಸ ನಡೆಯುತ್ತದೆ. ಇನ್ನು ಮಿತವ್ಯಯ ದೃಷ್ಟಿಯಿಂದ ಪೋಸ್ಟ್ ಆಫೀಸ್ ಹಾಗೆ ಇರುವ ಡಿವಿಜನಲ್ ಕಮಿಷನರ್ ಆಫೀಸನ್ನು ತೆಗೆದು ಹಾಕಬೇಕು. ಅದರ ಅವಶ್ಯಕತೆ ಇಲ್ಲ.

ಈ ದೇಶದಲ್ಲಿ ಪ್ರಜಾಪ್ರಭುತ್ವ ಸಂಪ್ರದಾಯಗಳು ವಿಷಮ ಕಾಲದಲ್ಲಿವೆ ಎಂದು ರಾಜ್ಯಪಾಲರು ತಮ್ಮ ಭಾಷಣದ ಕೊನೆಯಲ್ಲಿ ಹೇಳಿದ್ದಾರೆ. ಈ ವಿಷಮ ಕಾಲದಲ್ಲಿ ಪ್ರಜಾಪ್ರಭುತ್ವ ಸಂಪ್ರದಾಯಗಳನ್ನು ಕಾಪಾಡಬೇಕಾದುದು ಜನತೆಯ ಪ್ರತಿನಿಧಿಗಳಾಗಿ ಆರಿಸಿ ಬಂದಿರತಕ್ಕಂಥ ಶಾಸಕರ ಮುಖ್ಯ ಕರ್ತವ್ಯ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕು. ಪ್ರಜಾಪ್ರಭುತ್ವ ಕಸಿದುಕೊಳ್ಳಲು 1962 ರಲ್ಲಿ ಹಾಗೂ 1965 ರಲ್ಲಿ ಹೀಗೆ ಎರಡು ಸಲ ಯುದ್ಧ ನಡೆಯಿತು. 53 ಕೋಟಿ ಜನಸಂಖ್ಯೆ ಇರುವ ಭಾರತದಲ್ಲಿ ಪ್ರಜಾಪ್ರಭುತ್ವ ಬಿಟ್ಟು ಹೋದರೆ ಬಹು ದೊಡ್ಡ ಗಂಡಾಂತರ ಬರುತ್ತದೆ? ಇದನ್ನು ಶಾಸಕರು ಆಳವಾಗಿ ಆಲೋಚನೆ ಮಾಡಿ ಮುಂದುವರಿದ ದೇಶಗಳಲ್ಲಿ ಪ್ರಜಾಪ್ರಭುತ್ವ ಇರುವಂತೆ ನಮ್ಮ ದೇಶದಲ್ಲಿಯೂ ಉಳಿಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿರುವ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬೋಳಾ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಉಪಸಭಾಪತಿಗಳೇ, ರಾಜ್ಯಪಾಲರವರ ಭಾಷಣದ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುತ್ತಾ ಇದ್ದೇವೆ. ಸರಕಾರದ ನೀತಿ, ಧೋರಣೆ ಕಾರ್ಯಕ್ರಮದ ಬಗ್ಗೆ ರಾಜ್ಯಪಾಲರು ಪ್ರಸ್ತಾಪ ಮಾಡಬೇಕಾಗಿತ್ತು. ಆದರೆ ಆಡಳಿತ ಒಂದು ಪಟ್ಟಿ ನಮ್ಮ ಮುಂದೆ ಇಟ್ಟಿದ್ದಾರೆ. ರಾಜ್ಯಪಾಲರವರ ಭಾಷಣದ ಕೊನೆಯಲ್ಲಿ ಪ್ರಜಾಪ್ರಭುತ್ವ ಉಳಿಸಿಕೊಳ್ಳಬೇಕು, ಇವತ್ತು ಪ್ರಜಾಪ್ರಭುತ್ವ ವಿಷಮ ಕಾಲದಲ್ಲಿ ಸಂಕಟದ ಪರಿಸ್ಥಿತಿಯಲ್ಲಿ ಇದೆ ಎಂದು ಹೇಳಿದ್ದಾರೆ. ಈ ವಿಚಾರವನ್ನು ಅನೇಕ ಮಿತ್ರರು ಕೂಡ ಮಾತನಾಡಿ ವಿಶ್ಲೇಷಣೆ ಮಾಡಿದ್ದಾರೆ. ಪ್ರಜಾಪ್ರಭುತ್ವ ಉಳಿಸಿಕೊಳ್ಳದಿದ್ದರೆ ಚುನಾವಣೆಗಳಿಲ್ಲ, ಪಕ್ಷ ಪಂಗಡಗಳಿಲ್ಲ, ಅಸೆಂಬ್ಲಿ ಇಲ್ಲ ಪಾರ್ಲಿಮೆಂಟ್ ಇಲ್ಲ ಎಂದು ಆಗುತ್ತದೆ. ನಮ್ಮ ದೇಶ ಬಹು ವಿಶಾಲವಾದುದು, ಜನಸಂಖ್ಯೆಯಲ್ಲಿ ಏಷ್ಯಾ ದೇಶದಲ್ಲಿಯೇ ಭಾರತವು ಬಹು ದೊಡ್ಡ ದೇಶ, ಇಂಥ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯದಿದ್ದರೆ ಇದರಲ್ಲಿ ವಿಶ್ವಾಸ ಇಲ್ಲದಂತಾಗುವ ಸಂಭವ ಬರುತ್ತದೆ. ಆದುದರಿಂದ ಪ್ರಜಾಪ್ರಭುತ್ವ ಉಳಿಸಿಕೊಂಡು ಬರಬೇಕಾದುದು ಎಲ್ಲರ ಆದ್ಯ ಕರ್ತವ್ಯ. ಆದರೆ ನಮ್ಮ ದೇಶದಲ್ಲಿ

ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಲ್ಲದಂಥ ಪಕ್ಷಗಳು ಇವೆ. ಚುನಾವಣೆ ಕಾಲದಲ್ಲಿ ದೇಶದ ಘಟನೆಯಲ್ಲಿ ವಿಶ್ವಾಸ ಇಟ್ಟುಕೊಂಡಿದ್ದೇವೆ; ಅದಕ್ಕೆ ಗೌರವ ಕೊಡುತ್ತೇವೆ ಎಂದು ಹೇಳಿದರೂ ಚುನಾವಣೆಯಾಗಿದ ನಂತರ ಅಧಿಕಾರ ಪಡೆದುಕೊಂಡ ನಂತರ ದೇಶದ ಘಟನೆ ಮರೆತು ಅಧಿಕಾರದಲ್ಲಿ ಇರುತ್ತೇವೆ ಎನ್ನುವ ಪಕ್ಷ ಇದೆ. ಇಂದು ರಾಜ್ಯಗಳ ವಿದ್ಯಮಾನ ನೋಡಿದರೆ ಅಂಥ ದುಷ್ಟ ಶಕ್ತಿ ಪ್ರಾಬಲ್ಯವಾಗಿರುವುದು ಕಂಡು ಬರುತ್ತದೆ. ಆದುದರಿಂದ ಪ್ರಜಾಪ್ರಭುತ್ವ ಬೆಳೆಯುವುದಕ್ಕೆ ಅದನ್ನು ಉಳಿಸಿಕೊಳ್ಳಬೇಕು. ನಮ್ಮ ಘಟನೆಯಲ್ಲಿ ಪ್ರತಿಯೊಬ್ಬ ಪ್ರಜೆಗೂ ಮೂಲಭೂತ ಹಕ್ಕು ಇದೆ. ಇದನ್ನು ಉಳಿಸಿಕೊಳ್ಳುವ ಕೆಲಸ ಮಾಡುವುದು ಅಗತ್ಯ. ದೇಶದಲ್ಲಿ ಆರ್ಥಿಕ ಬೆಳವಣಿಗೆಯಾಗ ಬೇಕಾದರೆ ಬಹು ಸಂಖ್ಯೆಯಲ್ಲಿ ಇರತಕ್ಕಂಥ ಗ್ರಾಮಾಂತರ ಜನರ ಅಭಿವೃದ್ಧಿಯಾಗಬೇಕು. ಕೃಷಿ ಕಾರ್ಯದಲ್ಲಿ ನಿರತರಾಗಿ ಜೀವನ ಮಾಡತಕ್ಕಂಥವರಿಗೆ ಸವಲತ್ತು ಒದಗಿಸಿಕೊಡಬೇಕು. ಅಂಥ ಸದವಕಾಶ ದೊರೆಯುವುದು ಸರಕಾರದ ನೀತಿಯಲ್ಲಿ ಬರಬೇಕು. ಭೂಸುಧಾರಣೆಯ ಕಾರ್ಯಕ್ರಮ ನಮ್ಮ ರಾಜ್ಯ ಸರಕಾರ ಇಟ್ಟುಕೊಂಡಿದೆ ಎಂದು ಭಾಷಣದಲ್ಲಿ ಹೇಳಿದ್ದಾರೆ. ಬರಿ ನೀತಿ ವಿಮರ್ಶೆ ಮಾಡಿದರೆ ಭೂ ಸುಧಾರಣೆಯಾಗದು. ನೂರಾರು ವರ್ಷಗಳಿಂದ ರೈತರು ಭೂಮಿಯಲ್ಲಿ ತಮ್ಮ ಸರ್ವಸ್ವವನ್ನೂ ಹಾಕಿ ದುಡಿದಿದ್ದಾರೆ. ಒಳ್ಳೊಳ್ಳೆ ಉದ್ದೇಶ ಇಟ್ಟುಕೊಂಡು ಕಾನೂನು ಮಾಡಿದರೂ ಕೂಡ ಅಲ್ಲಿಯ ನಿಜವಾದ ಪರಿಸ್ಥಿತಿ ತಿಳಿದುಕೊಳ್ಳದೆ ಅವರ ಆರ್ಥಿಕ ಪರಿಸ್ಥಿತಿ ತಿಳಿದುಕೊಳ್ಳದೆ ಕೆಲವು ಸಲ ತಪ್ಪು ಮಾಡುವುದುಂಟು. ಅಂಥಾದ್ದರಲ್ಲಿ ಭೂ ಮಸೂದೆ ಒಂದು ಎಂದು ಹೇಳಬಹುದು.

4-00. P.M.

ಸಾಮಾನ್ಯವಾಗಿ ಭೂಮಿಯನ್ನು ಯಾರು ಇಟ್ಟುಕೊಂಡಿದ್ದಾರೆ ಎಂದರೆ ಕೆಳಮಟ್ಟದ ಮತ್ತು ಮಧ್ಯಮ ವರ್ಗದ ಜನರು. ಅವರು ಅದರಲ್ಲಿ ಸಂಪೂರ್ಣವಾಗಿ ಭೂಮಿಯ ಮಾಲೀಕತ್ವವನ್ನು ಹೊಂದಿದ್ದಾರೆ. ಈ ಭೂ ಮಸೂದೆಯನ್ನು ಜಾರಿಗೆ ಕೊಡುವ ಸಂದರ್ಭದಲ್ಲಿ ಒಂದು ಘೋಷಣೆಯನ್ನು ತಂದಿದ್ದೀರಿ. ಯಾರು ಭೂಮಿಯನ್ನು ಉಳುತ್ತಾರೋ ಆತನಿಗೆ ಆ ಭೂಮಿ ಸಿಕ್ಕಬೇಕು, ಅವನೇ ಆ ಅಧಿಕಾರವನ್ನು ಹೊಂದಿರಬೇಕು ಎನ್ನುವ ಘೋಷಣೆ ಇದೆ. ಆದರೆ ಸರ್ಕಾರದ ಈ ಘೋಷಣೆ ನಿಜವಾಗಿ ಪರಿಣಾಮ ಆಗುತ್ತದೆಯೇ ಎಂದರೆ ಅದು ರೈತರಿಗೆ ತುಂಬ ತೊಂದರೆಯಾಗುವಂತೆ ಪರಿಣಮಿಸುತ್ತಿದೆ. ಇದನ್ನು ಸರ್ಕಾರದವರು ಆಲೋಚನೆ ಮಾಡಲಿಲ್ಲ. ಯಾರಿಗೆ ಆಗಲಿ ಉಳುವವನಿಗೇ ಭೂಮಿ ಕೊಡಬೇಕು ಎಂದು ಹೇಳಿದರೆ ಆ ಭೂಮಿಯನ್ನು ಅವನೇ ಸಾಗುವಳಿ ಮಾಡಿ ಬೆಳೆಯುತಕ್ಕಂಥಾವನಾಗಿರಬೇಕು. ಮತ್ತು ಅದರಿಂದ ಉತ್ಪತ್ತಿ ತೆಗೆದು ಕೊನೆಯವರೆಗೂ ಅದರಲ್ಲೇ ನಿರತನಾಗಿರಬೇಕು. ಈ ರೀತಿಯಾಗಿ ಮಾಡುವುದಕ್ಕಾಗುತ್ತದೆಯೆ ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡದೆ ಒಂದು ಘೋಷಣೆಯನ್ನು ಮಾಡಿದ್ದಾರೆ. ಈ ಭೂ ಮಸೂದೆಯಿಂದ ಒಂದು ರೀತಿಯಾಗಿ ಒಕ್ಕಲಿಗರಿಗೆ ಒದ್ದಾಡುವ ಸ್ಥಿತಿಯಲ್ಲಿರುವ ಹಾಗೆ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಆದುದರಿಂದ ಇದನ್ನೂ ಪುನರ್ವಿಮರ್ಶೆ ಮಾಡಬೇಕೆಂದು ಹೇಳುತ್ತೇನೆ. ಈ ಭೂಮಿ, ಸಾಗುವಳಿ ಮಾಡುವವನಿಗೇ ಇದ್ದರೆ, ಅವನು ತಾನೇ ಸಾಗುವಳಿ ಮಾಡುತ್ತಾನೆಯೇ? ಆ ರೀತಿ ಅವನೇ ಸಂಪೂರ್ಣವಾಗಿ ಸಾಗುವಳಿ ಮಾಡುತ್ತಾನೆ ಎಂದು ಹೇಳುವುದಕ್ಕಾಗುವುದಿಲ್ಲ. ತಾನೊಬ್ಬನೇ ಒಂದು ವರ್ಷದ ಕೊನೆಯವರೆಗೂ ಸಂಪೂರ್ಣವಾಗಿ ಸಾಗುವಳಿ ಮಾಡುವುದಕ್ಕಾಗುವುದಿಲ್ಲ. ಯಾರೇ ಆಗಲಿ ತಾನು ಮತ್ತು ತನ್ನ ಕುಟುಂಬ ಸಹಿತ ಸಾಗುವಳಿ ಮಾಡಬೇಕು ಮತ್ತು ಕೂಲಿಯವರನ್ನೂ ಸಹ ತೆಗೆದುಕೊಳ್ಳಬೇಕು. ಸಾಗುವಳಿ ಮಾಡುತ್ತೇನೆಂದು ಸುಮ್ಮನೆ ಕುಳಿತರೆ ಸಾಗುವಳಿ ಮಾಡುವುದಕ್ಕಾಗುವುದಿಲ್ಲ. ಅಂತಹ ಸಾಗುವಳಿಯಿಂದ ಈ ಭೂಮಿ ಅವರಿಗೆ ಸಿಕ್ಕುವುದಾದರೆ ಅಂತಹ ಒಕ್ಕಲುತನ ಪಡೆದುಕೊಂಡವರಿಗೆ ಏನು ಪ್ರಯೋಜನವಾಗುತ್ತದೆ ? ಇದರಿಂದ ಈ ಒಕ್ಕಲುತನ ಮಾಡುವವರು ಸಾಗುವಳಿ ಬಿಟ್ಟು ಬೇರೆ ಯಾವ ಕೆಲಸವನ್ನು ಕಲಿಯಬಾರದು ಎನ್ನುವ ಭಯ ಜನರಲ್ಲಿ ಇದೆ. ಸರ್ಕಾರದವರಿಗೆ ಈ ಕಾರ್ಯಕ್ರಮದಿಂದ ಸರಿಯಾದ ಪರಿಣಾಮ ಆಗಲಿಕ್ಕಿಲ್ಲ. ಈ ಭೂ ಮಸೂದೆ ನಮ್ಮ ರಾಜ್ಯದಲ್ಲಿ 1965ನೇ ಇಸವಿಯಲ್ಲಿ ಜಾರಿಗೆ ಬಂದಿದೆ. ಬೇರೆ ಬೇರೆ ರಾಜ್ಯದಲ್ಲಿ ಬೇರೆ ಬೇರೆ ಸಮಯದಲ್ಲಿ ಬಂದಿದೆ. ನಿಜವಾಗಿಯೂ ಇದರ ಬಗ್ಗೆ ಪ್ರಸ್ತಾಪ ಮಾಡುವ ಉದ್ದೇಶ ಇದರಿಂದ ಪರಿಣಾಮ ಏನು ಆಗುತ್ತದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಪ್ರಸ್ತಾಪಿಸುತ್ತೇನೆ. ಈ ಭೂ ಮಸೂದೆಯನ್ನು ಜಾರಿಗೆ ತರಬೇಕು ಎನ್ನುವ ಆಕಾಂಕ್ಷೆ ಸರ್ಕಾರಕ್ಕೆ ಇದ್ದರೆ ಇದರಲ್ಲಿ ನಿಷ್ಪಕ್ಷಪಾತವಾಗಿ ಇರಬೇಕು ಮತ್ತು ಇದಕ್ಕಾಗಿ ಒಂದು ಸಮಿತಿಯನ್ನು ಮಾಡಬೇಕು. ಈ ಕಾರ್ಯಕ್ರಮದಲ್ಲಿ ಏನೇನು ಗೊಂದಲ ಪರಿಸ್ಥಿತಿ ಉಂಟಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳಬೇಕು.

(ಶ್ರೀ ಬೋಳಾ ರಘುರಾಮ ಶೆಟ್ಟಿ)

ಇಂತಹ ಕಾನೂನುಗಳಿಂದ ನಮ್ಮ ನೆರೆ ರಾಜ್ಯವಾದ ಕೇರಳದಲ್ಲಾಗಲೀ, ಪಶ್ಚಿಮ ಬಂಗಾಳದಲ್ಲಾಗಲಿ ಯಾವ ಪರಿಸ್ಥಿತಿ ಉಂಟಾಗಿದೆ ಎಂದರೆ ಅಲ್ಲಿ ಕೊಲೆಗಳು ಮತ್ತು ಇನ್ನೂ ಇತರ ಅನೇಕ ಕೇಸುಗಳು ನಡೆಯುತ್ತಾ ಇದೆ. ಮತ್ತು ಬೇಕಾದಷ್ಟು ಕೇಸುಗಳೂ ಕೂಡ ಪೆಂಡಿಂಗ್‌ನಲ್ಲಿವೆ. ಇಲ್ಲೂ ಕೂಡ ಆ ರೀತಿ ಪರಿಣಾಮವಾಗುತ್ತದೆ ಎಂದು ಹೇಳಬಹುದು. ನಿಜವಾಗಿಯೂ ನ್ಯಾಯವಾದ ಗೇಣಿ ಕೊಡುವವರನ್ನು ಒಕ್ಕಲು ಎಬ್ಬಿಸಬಾರದು. ಯಾವನು ಸ್ವಂತ ಸಾಗುವಳಿ ಮಾಡುತ್ತಾನೋ ಅವನಿಗೆ ಹೆಚ್ಚಿನ ಗೇಣಿಗೆ ಆಸ್ಪದ ಕೊಡದೇ ಇರುವಂಥಾದ್ದರಲ್ಲಿ ನ್ಯಾಯವಿಲ್ಲ.

ಇನ್ನು ಈ ಭೂ ಮಸೂದೆ ವಿಚಾರವಾಗಿ ನಮ್ಮ ಜಿಲ್ಲೆ ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯ ಎಲ್ಲ ಪ್ರತಿನಿಧಿಗಳೂ ಸೇರಿ ಇದರಿಂದ ನಮಗೆ ಆಗುವ ಪರಿಣಾಮವನ್ನು ಈಗಾಗಲೇ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದ ವತಿಯಿಂದ ನಮ್ಮ ಜಿಲ್ಲೆಯ ಮಟ್ಟಿಗೆ ಒಂದು ಆಶ್ವಾಸನೆಯನ್ನೂ ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯ ಜನರು ಈ ಭೂ ಮಸೂದೆಯಿಂದ ನಮಗೆ ಬಹಳ ಅನ್ಯಾಯವಾಗಿದೆ, ಇದರಿಂದ ನಮಗೆ ಯಾರಿಗೂ ಸುಖವಿಲ್ಲ ಎಂದು ಕೇಳಿದ್ದಕ್ಕೆ ಒಮ್ಮನಸ್ಸಿನಿಂದ ಏಕಾಭಿಪ್ರಾಯವನ್ನು ಕೊಟ್ಟು ಈ ತಿದ್ದುಪಡಿ ಮಸೂದೆಯಲ್ಲಿ ಏನು ಇದೆಯೋ ಅದರಲ್ಲಿ ಅದಷ್ಟುಮಟ್ಟಿಗೆ ಮನ್ನಾ ಮಾಡುತ್ತೇವೆಂದು ಆಶ್ವಾಸನೆಯನ್ನು ಸರ್ಕಾರದವರು ಕೊಟ್ಟಿದ್ದರೂ ಇಷ್ಟರವರೆಗೂ ಅವರು ಹೇಳಿದ ಆಶ್ವಾಸನೆ ಪೂರೈಸಲಿಲ್ಲ. ನಮ್ಮ ಕಷ್ಟ ಹೆಚ್ಚಾಗುತ್ತಾ ಇರುವಾಗ, ನ್ಯಾಯವಾದ ರೀತಿಯಲ್ಲಿ ಅಭಿಪ್ರಾಯವನ್ನು ಬದಲಾಯಿಸಲಿಕ್ಕೆ ಸಾಧ್ಯವಿಲ್ಲದಿದ್ದಾಗ ಪ್ರಜೆಗಳೂ ಕೂಡ ಈ ಪ್ರಜಾಪ್ರಭುತ್ವದಲ್ಲಿ ಜವಾಬ್ದಾರರಾಗಿರುವುದರಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಇದೇ 26ನೇ ತಾರೀಖು ರಿಪಬ್ಲಿಕ್ ಡೇ ದಿವಸ ಅವರಿಗೆ ಆಗಿರತಕ್ಕಂಥ ಈ ಅನ್ಯಾಯಕ್ಕಾಗಿ ಒಂದು ಪ್ರತಿಭಟನಾ ಮೆರವಣಿಗೆಯನ್ನು ಕೈಗೊಂಡಿದ್ದಾರೆ. ಆ ಮೆರವಣಿಗೆಯಲ್ಲಿ ಈ ಭೂ ಮಸೂದೆಯಿಂದ ನಮಗೆ ಏನೂ ಪ್ರಯೋಜನವಾಗುತ್ತಿಲ್ಲ, ಇದನ್ನು ತೆಗೆಯಬೇಕು ಮತ್ತು ನಮ್ಮ ಮೂಲಭೂತವಾದ ಹಕ್ಕನ್ನು ಕಸಿದುಕೊಳ್ಳುವುದು ಈ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಮತ್ತು ನಮ್ಮ ರಾಜ್ಯದ ಆರ್ಥಿಕ ಸ್ಥಿತಿಗೆ ಗಂಡಾಂತರ ಎಂದು ತಿಳಿಸುವುದಕ್ಕೋಸ್ಕರವಾಗಿಯೂ ಮತ್ತು ಇದೇ ಸಂದರ್ಭದಲ್ಲಿ ಕಪ್ಪು ಪತಾಕೆಯ ಪ್ರದರ್ಶನವನ್ನು ಏರ್ಪಡಿಸಲು ನಿರ್ಣಯ ಮಾಡಿದ್ದಾರೆ. ಆ ನಿರ್ಣಯದ ಪ್ರಕಾರ ನಾವೆಲ್ಲಾ ಆ ಕಾರ್ಯಕ್ರಮದಲ್ಲಿ ಭಾಗವಹಿಸುವವರಾಗಿದ್ದೇವೆ. ಈ ಪ್ರಶ್ನೆಯನ್ನು ಈ ಅಸೆಂಬ್ಲಿಯ ಮುಂದೆ ಹೇಳುವ ಅಗತ್ಯ ಏನೆಂದರೆ ಈಗಾಗಲೇ ಗೌರ್ನರ್‌ರವರು ಒಂದು ಆರ್ಡಿನೆನ್ಸ್‌ನ್ನು ಹೊರಡಿಸಿದ್ದಾರೆ. ಈ ಮಾನ್ಯ ಸಭೆಯಲ್ಲಿ ಅದು ಬರುವುದು ಇದೆ. ಇಂತಹ ಸಂದರ್ಭದಲ್ಲಿ ಜನತೆಯ ಪ್ರತಿನಿಧಿಗಳಾದ ತಾವು ಸರ್ಕಾರದಲ್ಲಿರುವಂಥಾವರು ಜನರ ನಿಜವಾದ ಕಷ್ಟವನ್ನು ತಿಳಿದುಕೊಳ್ಳದೆ ಮನಸ್ಸಿಗೆ ಬಂದ ಹಾಗೆ ಬೆಂಗಳೂರಿನಲ್ಲಿ ಕುಳಿತುಕೊಂಡು ಈ ಕಾನೂನು ಮಾಡಿದ್ದೀರಿ. ಈ ರೀತಿಯಾದಂಥ ಕಾನೂನುಗಳು ಇನ್ನು ಮುಂದೂ ಬರಬಹುದು. ಆದುದರಿಂದ ಬೇರೆ ಏನೂ ಉಪಾಯವಿಲ್ಲದೆ ನಮ್ಮ ಜಿಲ್ಲೆಯ ಧನಿಕರು, ಕೃಷಿಕರು ಇಂತಹ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಈ ಕಾರ್ಯಕ್ರಮ ಇಟ್ಟುಕೊಂಡಿರುವ ಉದ್ದೇಶ ಅಲ್ಲಿ ಜನತೆಯ ಕಷ್ಟ ಏನಿದೆ ಎಂಬುದನ್ನು ಈ ಸಭೆಯ ಮುಂದೆ ತಿಳುವಳಿಕೆ ಮಾಡುವುದಕ್ಕೆ. ಈ ಸಂದರ್ಭದಲ್ಲಿ ಸರಕಾರಕ್ಕೆ ಮನವಿ ಮಾಡಿಕೊಳ್ಳುವುದು ಏನೆಂದರೆ ಈ ಕಾರ್ಯಕ್ರಮ ನಡೆಯುವ ಮೊದಲೇ ನಿಮಗೆ ಬೇಕಾದವರನ್ನು ನಮ್ಮ ಜಿಲ್ಲೆಗೆ ಕಳುಹಿಸಿ ನಮ್ಮ ಜಿಲ್ಲೆಯ ರೈತವಾರು ಪದ್ಧತಿ ನೋಡಲಿ, ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಜನರ ಕಷ್ಟ ಸುಖಗಳು ಯಾವ ರೀತಿ ಇದೆ ಎಂದು ನೋಡಿಕೊಂಡು ಬರಲಿ. ಬೇರೆ ಜಿಲ್ಲೆಯ ಪರಿಸ್ಥಿತಿಯನ್ನೂ ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನೂ ನೋಡಿಕೊಂಡು ಬರಲಿ. ನಮ್ಮ ಜಿಲ್ಲೆಯ ಪರಿಸ್ಥಿತಿ ಮಟ್ಟಿಗೆ ಹೇಳುವುದಾದರೆ ಈ ಭೂ ಮಸೂದೆಯಿಂದ ಯಾರಿಗೂ ಪ್ರಯೋಜನವಿಲ್ಲ, ಎಲ್ಲರಿಗೂ ತೊಂದರೆಯಾಗುತ್ತದೆ ಮತ್ತು 5 ವರ್ಷದಿಂದಲೂ ಯಾರೂ ಗೇಣಿ ಕೊಡುವ ಸ್ಥಿತಿಯಲ್ಲಿಲ್ಲ ಮತ್ತು ಯಾರೂ ಗೇಣಿ ಪಡೆಯುವ ಸ್ಥಿತಿಯಲ್ಲೂ ಇಲ್ಲ. ಅನೇಕ ವರ್ಷದಿಂದಲೂ ಸಾಲ ಮಾಡಿಕೊಂಡು ಬರುತ್ತಿದ್ದಾರೆ. ನಮ್ಮ ಜಿಲ್ಲೆಗೆ ಈ ಪರಿಸ್ಥಿತಿ ಉಂಟಾದದ್ದು ಸರ್ಕಾರದ ಕಾನೂನುಗಳಿಂದಲೇ ಎಂದು ಹೇಳಬಯಸುತ್ತೇನೆ. ಆದುದರಿಂದ ಅಲ್ಲಿಯ ಜನ ಇದಕ್ಕಾಗಿ ಒಂದು ಪ್ರತಿಭಟನೆಯನ್ನು ಮಾಡಬೇಕೆಂದು ನಿರ್ಣಯ ಮಾಡಿದ್ದಾರೆ.

ನಾನು ಬೇರೆ ಯಾವ ವಿಷಯವನ್ನೂ ಹೇಳದೆ ಈ ಭೂ ಮಸೂದೆ ವಿಚಾರವನ್ನೆ ಹೇಳುವುದಕ್ಕೆ ಮುಖ್ಯವಾದ ಕಾರಣ ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಈ ಕಾಯಿದೆಯಿಂದ ನಮಗೆ ಅಲ್ಲೋಲಕಲ್ಲೋಲವಾಗಿದೆ ಎಂದು ಹೇಳಬಯಸುತ್ತೇನೆ. ನಮ್ಮ ಜಿಲ್ಲೆ ಒಳ್ಳೆಯ ರಸಿಕರು ಇರುವಂಥಾ ಜಿಲ್ಲೆ. ಜನರಲ್ಲಿ ಒಳ್ಳೆಯ ಪ್ರೇಮ, ವಿಶ್ವಾಸ ಬೆಳಸಿಕೊಂಡು ಬಂದಂಥ ಒಕ್ಕಲುತನದ ಜಿಲ್ಲೆ. ಸರ್ಕಾರದವರು ಮಾಡಿರುವ ಈ ಭೂ ಮಸೂದೆಯ ಕಾರಣದಿಂದ ಎಲ್ಲರೂ ಕೂಡ ಕರ್ತವ್ಯ

ರೋಪರಾಗಿದ್ದಾರೆ. 2-3 ವರ್ಷದಿಂದಲೂ ಕೂಡ ಸರಿಯಾದ ಒಂದು ಕಾನೂನು ನಮ್ಮ ಜಿಲ್ಲೆಯಲ್ಲಿ ಇಲ್ಲದೇ ಇರುವುದರಿಂದ ಮತ್ತು ಸರ್ಕಾರದ ಗಮನಕ್ಕೆ ಈ ವಿಷಯಗಳನ್ನು ಆಗಿಂದಾಗ್ಗೆ ತಂದಿದ್ದರೂ ಕೂಡ ಯಾವ ಒಂದು ವ್ಯವಸ್ಥೆಯನ್ನೂ ಕೂಡ ಇದುವರೆಗೆ ಮಾಡದೇ ಇರುವುದರಿಂದ ನಾವು ಮಾಡಿ ಕೊಂಡಿರುವ ಕಾರ್ಯಕ್ರಮಕ್ಕೆ ಮತ್ತು ಜನರ ಕಷ್ಟಕ್ಕೆ ಸರ್ಕಾರದವರೇ ಜವಾಬ್ದಾರರು ಮತ್ತು ನಾವು ಮುಂದೆ ಏನು ಕಾರ್ಯಕ್ರಮ ಕೈಗೊಳ್ಳುತ್ತೇವೋ ಅದಕ್ಕೆಲ್ಲಾ ಸರ್ಕಾರದವರೇ ಹೊಣೆ ಗಾರರು ಎಂದು ಈ ಸಂದರ್ಭದಲ್ಲಿ ಹೇಳಿ, ಅಧ್ಯಕ್ಷರು ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **Smt. WINNIFRED F. FERNANDES** (Coondapur).—Mr. Speaker' Sir, I must thank the Governor for the detailed Address. I can say it is the longest in the history of Mysore Legislature. But, I am sorry to state that he has not uttered a single word regarding welfare of women. Today, as it is, women folk can govern the world, and yet he has ignored us. I am at a loss to understand why he has not mentioned a word about welfare of women. Sir, I request the Governor, through you, to see that at least in future he mentions something about welfare of wo nen.

I must thank the Government for accepting the Pay Commission's recommendations. But, the Governor has not mentioned anything about the local candidates. Some days back they were on hunger strike, but the Government has not taken any decision so far about them. If their services are terminated, they will be on the streets. I, therefore, request the Government to see that the services of these local candidates are regularised.

About the Mahajan Commission's Report the Governor has said that it should be treated as an award and implemented in its entirety. Of course, the Central Government has delayed its implementation too much. These delaying tactics should be stopped forthwith. I once again request the Government to see that the Mahajan Commission's recommendations are implemented without any loss of time.

Regarding land reforms, I wish to state, that there are thousands of applications pending for a long time in the Land Tribunals. Of course, the Government have come out with a statement saying that they will be disposed of by Munsiffs' Courts. I do not know whether it is going to remain only as preaching or it will be put into practice? These cases which are pending should be disposed of at once. Of course, the Government has stated that a Bill will be brought forward in this behalf. But I do not know what good will be turned out by that. I request the Government to see that some justice is done both to the landlords and the tenants.

Then I like to speak about lands to be distributed to the Scheduled Castes and Scheduled Tribes in this Gandhi Centenary year. To take up these lands they have to pay a sub-division fee of Rs. 16. Formerly, it was only Rs. 4 and now it has been raised to Rs. 16. When these poor people cannot afford to have one meal a day, how can they afford to pay Rs. 16 towards sub-division fees? Have the Government any intention to give them lands? It is only their intention to prevent these persons from taking up these lands. If you exempt this fee of Rs. 16 and then

(SMT. WINNIFRED F. FERNANDES)

assign lands to these Scheduled Castes and Scheduled Tribes and to the landless poor they will definitely take them up. But the Government has taken a decision, that is what I was told, that unless they pay Rs. 16 towards Sub-division fee no land can be assigned to them. Even in the District Development Council a resolution was unanimously adopted saying this, this S.D. fees should be exempted and lands assigned to these people. I do not know what decision the Government will take. But if the Government really wants to do any favour to these people in this Gandhi Centenary year you have to exempt them from the payment of this fees.

About the constitution of the Consultative Committee at taluk level for months together the Government have been saying they are going to constitute this committee. But, so far. no action has been taken. They have been only preaching about this and not practising it. If you want to implement the land reforms you have to constitute a committee and see that all these land assignment applications are disposed of earlier.

The Governor has stated that a project to rehabilitate landless persons in about 1,000 acres of forest land released in Periyapatna Taluk, with the assistance of the Mysore Rehabilitation and Development Agency is to be started. Of course, everyone should appreciate it and it is worth praise that such a project is coming up for the educated unemployed. But I do not know whether the Government is going to give any facilities to these educated unemployed. If you give lands, that is not sufficient. You must give all assistance, aid, subsidy, loan, etc. Then only it will be a great boon to them. It is also stated that another project to rehabilitate educated unemployed persons in a block of Government land released for the purpose, in Chickamagalur District, is under consideration. I would suggest that the Government should consider to have these projects in other districts also, particularly in South Kanara and Coondapur because thousands of unemployed people both ladies and gentlemen, are there. This Project should be extended to Coondapur at once.

Regarding major and medium irrigation, it is stated that Rs. 90 crores has been provided in the Fourth Five Year Plan. A big share of this amount should be given to South Kanara District since this District has so far been ignored by the Government. Not a single medium or major irrigation project has come up there. Only a step-motherly treatment has been given to South Kanara District in this behalf. I, therefore, urge upon the Government to see that in this Fourth Five Year Plan a big share of the amount is provided to take up major and medium irrigation projects in South Kanara District. So many investigations have already been conducted and many estimates have been prepared. In Coondapur itself, investigation was conducted in respect of Halaji and Bijur Projects and estimates for salt water reclamation dam was prepared for Rs. 5 lakhs. I request Government to take up all these projects in this budget year itself.

About Animal Husbandry and Agriculture, I can say that these are twins. But since Animal Husbandry has not been develpoed so far, more funds should be allotted for this item, so that the ryots could reap the benefits. Rural dispensaries should be started in each taluk and Piggery and Poultry Farms should be started in each taluk.

About fisheries, I would like to say that the facilities that were being given to the fishermen previously have been stopped. Previously they were giving engines at subsidised rates. Now these engines are to be taken through the co-operative societies. These co-operative societies have made it a monopoly and the genuine fishermen do not get the mechanised boats. At least in future these boats should be given in the ratio of fifty-fifty to co-operative societies and to fishermen directly. Formerly the fishermen were getting foreign engines at a cheaper rate and they were more durable. But they have stopped the import of these foreign engines and now they are supplying only Indian made engines which are costly also.

Regarding law and order, the less said the better, because, now-a-days everywhere instead of maintaining law and order they are murdering law and order. I am particulatly speaking of Coondapur where the police authorities are only after vitamin 'M'; they simply cook up cases to see that poor people are harassed. Government should see that justice is meted out in this respect.

With these words, I thank the Chair and conclude.

ಶ್ರಿ ಆರ್. ಮುನಿಸ್ವಾಮಯ್ಯ (ಆನೇಕಲ್). ಸ್ವಾಮಿ, ಮಾನ್ಯ ರಾಜ್ಯಪಾಲರು ಶಾಸಕರನ್ನು ಉದ್ದೇಶಿಸಿ ಮಾಡಿದಂತ ಭಾಷಣವನ್ನು ನಾನು ಸ್ವಾಗತಿಸುತ್ತೇನೆ. ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮುಂದೆ ನಮ್ಮ ಸರಕಾರ ಯಾವ ಯಾವ ರೀತಿಯಲ್ಲಿ ಕಾರ್ಯಕರಾಪಗಳನ್ನು ನಡೆಸುತ್ತದೆ ಎನ್ನುವುದನ್ನು ಸೂಚಿತವಾಗಿ ತಿಳಿಸಿದ್ದಾರೆ.......

ಶ್ರೀ ಎಂ. ನಾಗಪ್ಪ.—ನಮ್ಮ ಪಕ್ಷವನ್ನು ಕಡೆಗಣಿಸುತ್ತಾ ಇದ್ದೀರಿ. ಒಂದು ಪಕ್ಷಕ್ಕೆ ಎರಡು ಮೂರು ದಿವಸವೂ ಅವಕಾಶಕೊಡದಿದ್ದರೆ ಹೇಗೆ? we are not going to tolerate it.

Mr. DEPUTY SPEAKER.—Hon. Member will get his chance today.

ಶ್ರೀ ಎಂ. ನಾಗಪ್ಪ.—ಯಾವ ಯಾವ ಪಕ್ಷದ ಜನರಿಗೆ ಎಷ್ಟೆಷ್ಟು ಅವಕಾಶ ಕೊಟ್ಟಿದೆ ಎಂಬುದನ್ನು ತಿಳಿಸಬೇಕು.

Mr. DEPUTY SPEAKER.—According to the instructions of the Speaker, the list is prepared. We will sit up to 7O' clock. It is now 4-30 p.m. we have another $2\frac{1}{2}$ hours at our disposal.

Sri M. NAGAPPA.—I want my chance immediately. I am not prepared to allow the debate to go on.

Mr. DEPUTY SPEAKER.—I will give the Hon. member a chance after Sri H. M. Channabasappa and Sri C. M. S. Sastry.

Sri M. NAGAPPA.—If I am not given a chance immediately, I will not allow the debate to go on.

Sri H. M. CHANNABASAPPA.—The next chance may kindly be given to him. I will talk on Tuesday.

Sri V. N. PATIL.—Kindly read the list of names who will be called upon to speak today.

Mr. DEPUTY SPEAKER.—I will give it later on.

ಶ್ರೀ ಆರ್. ಮುನಿಸ್ವಾಮಯ್ಯ (ಅನೇಕಲ್).—ಸ್ವಾಮಿ, ನಾನು ರಾಜ್ಯಪಾಲರ ಭಾಷಣವನ್ನು ನೋಡಿದ್ದರಲ್ಲಿ ಅದರಲ್ಲಿ ಚಿಕ್ಕ ಪುಟ್ಟ ನೀರಾವರಿಯ ವಿಷಯಕ್ಕೆ ಸಂಬಂಧಪಟ್ಟ ಕಾಮಗಾರಿಗಳು ನೀರಾವರಿ ಬಾವಿಗಳ ನಿರ್ಮಾಣದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಇದುವರೆಗೂ ನಾವು ನೋಡಿದ ಹಾಗೆ ಈ ಭಾಗದಲ್ಲಿ ನಡೆದಿರತಕ್ಕ ನೀರಾವರಿ ಕೆಲಸಗಳು ಎಲ್ಲಿ ನಡೆದಿವೆ ಎನ್ನ ತಕ್ಕಂಥಾದ್ದು ನಮ್ಮ ಕಣ್ಣಿಗೆ ಕಾಣುವುದಿಲ್ಲ. ಎಲ್ಲಿ ಬಾವಿಗಳನ್ನು ತೋಡಿಸಿದ್ದಾರೆ, ಏನು ಸಹಾಯ ಮಾಡಿದ್ದಾರೆ ಎನ್ನತಕ್ಕಂಥಾದ್ದು ನಿರಾಶಾದಾಯಕವಾಗಿದೆ. ಎಷ್ಟೋ ಕಡೆ ಬೋರ್‌ವೆಲ್ ತೆಗೆಯುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ ಎನ್ನತಕ್ಕದ್ದನ್ನು ನಾವು ಕೇಳಿದ್ದೇವೆ. ಆದರೆ ಆ ಕಾರ್ಯ ವನ್ನು ಸಾಕಷ್ಟು ರೀತಿಯಲ್ಲಿ ಸಾಗಿಸಿದಂತೆ ಕಾಣುವುದಿಲ್ಲ. ನಮಗೆ ಬಾವಿಗಳ ನೀರು ವ್ಯವಸಾಯಕ್ಕೆ ಆಧಾರ ಇದಕ್ಕೆ ಹೆಚ್ಚಿನ ಲಕ್ಷ್ಯ ಕೊಟ್ಟು ಹೆಚ್ಚು ಹೆಚ್ಚು ಬಾವಿಗಳನ್ನು ತೆಗೆಸುವುದಕ್ಕೆ ಸರ್ಕಾರದವರು ಸಹಾಯ ಮಾಡಬೇಕು, ಹೆಚ್ಚು ನೀರಾವರಿ ಕೆಲಸಗಳನ್ನು ಮಾಡಿಸಬೇಕು, ಇದಕ್ಕೆ ಹೆಚ್ಚಿನ ಹಣವನ್ನು ತೊಡಗಿಸಬೇಕು ಎಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಆಹಾರ ರಂಗದ ಪರಿಸ್ಥಿತಿ ಆಶಾದಾಯಕವಾಗಿದೆ ಎಂದು ರಾಜ್ಯಪಾಲರು ಭಾಷಣದಲ್ಲಿ ಹೇಳಿದ್ದಾರೆ. ಇದು ಸಂತೋಷದ ಸಂಗತಿ. ಸುಗ್ಗಿ ಕಾಲದಲ್ಲಿ ಆಹಾರ ಪದಾರ್ಥಗಳನ್ನು ಸ್ವಲ್ಪ ಮಟ್ಟಿಗೆ ಅಗ್ಗವಾಗಿ ಸಿಕ್ಕುತ್ತವೆ. ಇದು ಸಂತೋಷಕರವಾದ ವಿಷಯ. ಈಗ 2–3 ವರ್ಷಗಳಿಂದ ಆಹಾರ ಪದಾರ್ಥಗಳು ಸರಿಯಾಗಿ ಸಿಕ್ಕುತ್ತಾ ಇರಲಿಲ್ಲ. ಡಿಪೋಗಳಿಗೆ ಹೋಗಿ ತಗೆದುಕೊಂಡು ಬರಬೇಕಾಗಿತ್ತು. ಹಳ್ಳಿಗಳಲ್ಲಿಯೂ ಆಹಾರಧಾನ್ಯಗಳು ಸರಿಯಾಗಿ ಸಿಕ್ಕುತ್ತಾ ಇರಲಿಲ್ಲ, ಈಗ ಹಳ್ಳಿಗಳಲ್ಲಿಯೂ ಮತ್ತು ಪೇಟೆಗಳಲ್ಲಿ ಡಿಪೋಗಳಲ್ಲಿಯೂ ಸಾಕಷ್ಟು ಆಹಾರಧಾನ್ಯ ಸಿಕ್ಕುತ್ತಾ ಇದೆ. ಆಹಾರಧಾನ್ಯಗಳ ಬೆಲೆ ಈ ದಿವಸ ಬಿದ್ದು ಹೋಗಿದೆ. ಬೆಳೆಯನ್ನು ಬೆಳೆದ ರೈತನಿಗೆ ಅವನು ಬೆಳೆದ ಮಾಲಿಗೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ. ರೈತ ತನಗೆ ಬೇಕಾದ ಬಟ್ಟೆ, ಗೊಬ್ಬರ, ವ್ಯವಸಾಯ ಸಲಕರಣೆ ಇವುಗಳನ್ನು ಕೊಂಡುಕೊಳ್ಳುವುದಕ್ಕೆ ತಮ್ಮ ಮಕ್ಕಳ ಮದುವೆ ಮುಂಜಿ ಮಾಡುವುದಕ್ಕೆ ಭೂಮಿಯಿಂದ ಸಾಕಷ್ಟು ಹಣ ದೊರಕುತ್ತಿಲ್ಲ. ಇದನ್ನು ಸರ್ಕಾರದವರು ಕೂಡಲೇ ಲೆಕ್ಕ ಹಾಕಿ ರೈತ ಬೆಳೆದಂತಹ ಮಾಲಿಗೆ ಸರಿಯಾದ ಬೆಲೆಯನ್ನು ದೊರಕಿಸಿಕೊಡಬೇಕು. ಇವೊತ್ತು ಯಾವುದೇ ಒಂದು ಕಾರ್ಖಾನೆಯನ್ನು ತೆಗೆದುಕೊಳ್ಳಿ ಅಲ್ಲಿ ಮನುಷ್ಯನ ಕೂಲಿಯನ್ನು ಲೆಕ್ಕ ಹಾಕುತ್ತಾರೆ, ಅದಕ್ಕೆ ಕೊಂಡಂತಹ ಯಂತ್ರ ಸಾಮಗ್ರಿಗಳ ಲೆಕ್ಕವನ್ನು ಹಾಕುತ್ತಾರೆ, ಕೊಂಡಂಥಾ ಕಚ್ಚಾ ಪದಾರ್ಥಗಳ ಲೆಕ್ಕವನ್ನು ಹಾಕುತ್ತಾರೆ. ತಯಾರಾದಂತಹ ಪದಾರ್ಥಗಳ ಲೆಕ್ಕ ಮುಂತಾದ ಬೆಲೆ ಯನ್ನು ಲೆಕ್ಕಹಾಕಿ, ತಯಾರಾದ ಪದಾರ್ಥಗಳಿಗೆ ಇಷ್ಟು ಬೆಲೆಯನ್ನು ಕೊಡಬೇಕು ಎಂದು ನಿಗದಿ ಮಾಡುತ್ತಾರೆ. ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕ ಕೂಲಿಗಾರರಿಗೆ ಸಾಕಷ್ಟು ಉತ್ತೇಜನವನ್ನು ಕೊಡುತ್ತಾರೆ. ಕಾರ್ಖಾನೆಯನ್ನು ಇಟ್ಟಿರತಕ್ಕ ಮಾಲೀಕರಿಗೂ ಉತ್ತೇಜನ ದೊರೆಯುತ್ತಿದೆ. ಆದರೆ ಆಹಾರಧಾನ್ಯವನ್ನು ಬೆಳೆಯತಕ್ಕ ರೈತನಿಗೆ ಇಂಥಾ ಲೆಕ್ಕಾಚಾರವನ್ನು ಇಡತಕ್ಕಂಥ ಅನುಕೂಲ ಒದಗಿಲ್ಲ. ಅವನಿಗೆ ಸರಿಯಾದಂತಹ ಉತ್ತೇಜನ ಸಿಕ್ಕಿಲ್ಲ. ಅವನು ಅನಕ್ಷರಸ್ಥನಾಗಿದ್ದಾನೆ. ಅವನು ವ್ಯವಸಾಯಕ್ಕೆ ಉಪಯೋಗಿಸತಕ್ಕ ಬೀಜ, ಗೊಬ್ಬರ, ವ್ಯವಸಾಯದ ಸಲಕರಣೆಗಳು, ವ್ಯವಸಾಯಕ್ಕೆ ಅದರ ಬೇಸಾಯಕ್ಕೆ ಕೊಡತಕ್ಕಂಥ ಕೂಲಿ ಇತ್ಯಾದಿಗಳನ್ನು ಲೆಕ್ಕ ಇಟ್ಟುಕೊಂಡು ಎಷ್ಟು ಆಹಾರೋತ್ಪಾದನೆ ಆಯಿತು, ಎಷ್ಟು ಹಣ ಅದಕ್ಕೆ ಖರ್ಚಾಯಿತು ಎನ್ನತಕ್ಕಂಥ ಲೆಕ್ಕವನ್ನು ರೈತ ಇಟ್ಟುಕೊಳ್ಳುವುದಕ್ಕೆ ಆಗುತ್ತಿಲ್ಲ. ಇದರಿಂದಾಗಿ ರೈತನಿಗೆ ನಷ್ಟವಾಗಿದೆ. ನಮ್ಮ ದೇಶಕ್ಕೆ ಆಹಾರವನು ಬೆಳೆದು ಒದಗಿಸಿಕೊಟ್ಟ ರೈತನಿಗೆ ನಿರಾಶೆಯುಂಟಾಗಿದೆ. ಆದ್ದರಿಂದ ರೈತರಿಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟು ಆಹಾರ ಪದಾರ್ಥಗಳ ಬೆಲೆ ಇಳಿಯದಂತೆ ಮತ್ತು ಕೊಂಡು ಕೊಳ್ಳುವವರಿಗೆ ಕಷ್ಟವಾಗದಂತೆ ಆಹಾರಧಾನ್ಯಗಳ ಬೆಲೆಯನ್ನು ನಿಗದಿ ಮಾಡಬೇಕು. ಸರ್ಕಾರ ರೈತರಿಗೆ ಸಬ್ಸಿಡಿ ಕೊಟ್ಟು ರೈತನಿಗೆ ನಷ್ಟವಾಗದಂತೆ ಪ್ರೋತ್ಸಾಹ ಕೊಡಬೇಕು. ಆಹಾರಧಾನ್ಯ ಗಳನ್ನು ಸಾಕಷ್ಟು ರೈತರು ಹೆಚ್ಚಾಗಿ ಬೆಳೆದು ಜನರಿಗೆ ಒದಗಿಸುವಂಥಹ ಒಂದು ವ್ಯವಸ್ಥೆಯನ್ನು ಮಾಡಿದ್ದಕ್ಕೋಸ್ಕರ ನಾನು ನಮ್ಮ ವ್ಯವಸಾಯ ಶಾಖೆಯ ಮಂತ್ರಿಗಳಾದ ಶ್ರೀಮಾನ್ ರಾಚಯ್ಯ ನವರನ್ನು ನಾನು ಅಭಿನಂದಿಸುತ್ತೇನೆ.

ಭೂಸುಧಾರಣೆಯ ವಿಷಯದಲ್ಲಿ ಹೇಳುವುದಾದರೆ ಎಲ್ಲಾ ಕಡೆಗಳಲ್ಲಿಯೂ ರೈತರು ಗೋಮಾಳದ ಭೂಮಿಯನ್ನು, ಸರ್ಕಾರದ ಬೇರೆ ಬೇರೆ ಭೂಮಿಗಳನ್ನೂ ಅನಧಿಕೃತವಾಗಿ

ಒತ್ತುವರಿ ಮಾಡಿ ಉತ್ತಿದ್ದಾರೆ. ಉಳಿದಿರುವ ಸರ್ಕಾರದ ಭೂಮಿ ಬಹು ಕಡಿಮೆಯಿದೆ. ಮತ್ತು ಸರ್ಕಾರದವರು ಇರತಕ್ಕ ಭೂಮಿಯನ್ನು ಹಂಚುವುದಕ್ಕೆ ತಾಲ್ಲೂಕಿಗೆ ಬಂದರಂತೆ. ಗಣ್ಯ ಮಹಾ ವ್ಯಕ್ತಿಗಳ ಸಮಾಲೋಚನಾ ಸಮಿತಿಯನ್ನು ಮಾಡುತ್ತೇವೆ. ಎಂದು ಶ್ರೀಮಾನ್ ಕೌಜಲ್ಗಿಯವರು ಹೇಳಿದ್ದಾರೆ. ಅದನ್ನು ಜಾಗ್ರತೆಯಾಗಿ ಮಾಡಬೇಕು. ಒತ್ತುವರೆ ಮಾಡಿರತಕ್ಕ ಭೂಮಿಯನ್ನು ಒತ್ತುವರಿದಾರರಿಂದ ಬಿಡಿಸುವುದಕ್ಕೆ ಕಠಿಣವಾದ ಕ್ರಮಗಳನ್ನು ನಡೆಸಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಪಟ್ಟಾ ಪುಸ್ತಕಗಳನ್ನು ಮುದ್ರಣ ಮಾಡಿಸಿದ್ದಾರೆಂದು ನಾನು ಕೇಳಿದ್ದೇನೆ. ಅದನ್ನು ಆದಷ್ಟು ಜಾಗ್ರತೆ ರೈತರಿಗೆ ಒದಗಿಸಿ ಅವರ ಕಷ್ಟವನ್ನು ಕಡಿಮೆ ಮಾಡಬೇಕೆಂದೂ, ಅವರು ಬ್ಯಾಂಕು ಮತ್ತು ಸೊಸೈಟಿಗಳಲ್ಲಿ ಸಾಲ ವಗೈರೆ ತೆಗೆದುಕೊಳ್ಳುವ ಅನುಕೂಲ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಹರಿಜನ ಗಿರಿಜನರಿಗೆ ನಿವೇಶನಗಳನ್ನು ಕೊಡುವುದಕ್ಕಾಗಿ, ಅದನ್ನು ಅಳೆಯುವುದಕ್ಕೆ ಅದರ ರೆಕಾರ್ಡ್ ಬಿಲ್ಡಪ್ ಮಾಡುವುದಕ್ಕೆ ಆದೇಶವನ್ನು ಕೊಟ್ಟು ರೆಕಾರ್ಡ್ ಬಿಲ್ಡಪ್ ಆಗಿ ಜಮೀನನ್ನು ಅಕ್ವೈರ್ ಮಾಡುವಾಗ ಅದಕ್ಕೆ ಹಣವಿಲ್ಲ ಎಂದು ಹೇಳಿ ಅದನ್ನು ಹಾಗೆಯೇ ಬಿಟ್ಟರೆ ಆದರಿಂದ ಹರಿಜನರಿಗೆ ಯಾವ ಉಪಯೋಗವೂ ಆಗುವುದಿಲ್ಲ. ನಮ್ಮ ಪ್ರದೇಶದಲ್ಲಿ ಈಗ ಸುಮಾರು 12 ವರ್ಷಗಳಿಂದ ಸರ್ಕಾರದವರು ಅಕ್ವೈರ್ ಮಾಡತಕ್ಕಂಥ ಭೂಮಿ ಹಾಗೆಯೇ ಬಿದ್ದಿದೆ ಹರಿಜನರಿಗೆ ನಿವೇಶನಗಳನ್ನು ಶೀಘ್ರವಾಗಿ ಹಂಚಬೇಕು. ಅದಕ್ಕಾಗಿ ಅದರ ಮಾಲೀಕರಿಗೆ ಹಣವನ್ನು ಒದಗಿಸಬೇಕು ಎಂದು ನಾನು ಹೇಳುತ್ತೇನೆ.

ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುವ ವಿಚಾರದಲ್ಲಿ ಹೇಳುವುದಾದರೆ ಈಗ 30 ವರ್ಷಗಳಿಂದ ಒಂದೇ ಸಂಖ್ಯೆಯ ಸ್ಕಾಲರ್‌ಷಿಪ್‌ಗಳನ್ನು ಇಟ್ಟಿದ್ದಾರೆ. ಅವುಗಳಿಗೆ ಸ್ವಲ್ಪಮಟ್ಟಿನ ಹಣವನ್ನು ಮಾತ್ರ ಇಟ್ಟಿದ್ದಾರೆ. ಅವುಗಳನ್ನು ಹೆಚ್ಚಿಸಿಲ್ಲ, ಯಾವುದೋ ಒಂದು ಕಾಲಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಎಷ್ಟೋ ಇತ್ತು. ಈಗಲೂ ಅಷ್ಟೇ ಸಂಖ್ಯೆಗಳಿಗೆ ಅಷ್ಟೇ ಹಣವನ್ನು ಒದಗಿಸುತ್ತಿದ್ದಾರೆ. ವರ್ಷೇ ವರ್ಷೇ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ. ಅದಕ್ಕನುಗುಣವಾಗಿ ಸ್ಕಾಲರ್‌ಷಿಪ್‌ಗಳ ಸಂಖ್ಯೆಯನ್ನು ಮತ್ತು ಹಣವನ್ನು ಹೆಚ್ಚು ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ವಿದ್ಯಾರ್ಥಿ ವೇತನಗಳನ್ನು ಸಮಾಜಕಲ್ಯಾಣ ಇಲಾಖೆಯವರು ಹಂಚುತ್ತಿದ್ದಾರೆ. ಮೊದಲು ವಿದ್ಯಾ ಇಲಾಖೆಯವರು ವೇತನಗಳನ್ನು ಹಂಚುವಾಗ ಆಯಾ ತಾಲ್ಲೂಕು ಬೋರ್ಡಿನ ಮೆಂಬರುಗಳು ಮತ್ತು ಆಯಾತಾಲ್ಲೂಕಿನ ಕೆಲವು ಗಣ್ಯವ್ಯಕ್ತಿಗಳಿಂದ ಕೂಡಿದ ಸಮಿತಿಗಳನ್ನು ಮಾಡಿ ಅವರ ಮುಖಾಂತರ ವಿದ್ಯಾರ್ಥಿ ವೇತನಗಳನ್ನು ಹಂಚುತ್ತಿದ್ದರು. ಈಗ ಆ ಪದ್ಧತಿಯನ್ನು ತೆಗೆದು ಹಾಕಿ ಸಮಾಜಕಲ್ಯಾಣ ಇಲಾಖೆಯವರು ಹಂಚುವ ವ್ಯವಸ್ಥೆಯನ್ನು ಮಾಡಿದ್ದಾರೆ. ಇದರಿಂದ ಅರ್ಹರಾದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ದೊರೆಯುತ್ತಾ ಇಲ್ಲ. ಸ್ಕಾಲರ್‌ಷಿಪ್‌ಗಳು ಬರುತ್ತಿದ್ದವರಿಗೆ ನಿಲ್ಲಿಸಿರತಕ್ಕ ಉದಾಹರಣೆಗಳಿವೆ. ಒಂದು ಸಾರಿ ಒಬ್ಬ ವಿದ್ಯಾರ್ಥಿಗೆ ಸ್ಕಾಲರ್‌ಷಿಪ್ ಅನ್ನು ಕೊಟ್ಟ ಮೇಲೆ ಅವನು ಪಾಠಶಾಲೆಯನ್ನು ಬಿಡುವವರೆಗೂ, ತೇರ್ಗಡೆ ಯಾಗುತ್ತಿದ್ದರೆ ಅವನಿಗೆ ಸ್ಕಾಲರ್‌ಷಿಪ್ ಅನ್ನು ಮುಂದುವರಿಸಬೇಕು. ಸಮಾಜಕಲ್ಯಾಣ ಇಲಾಖೆಯ ಒಬ್ಬ ಅಧಿಕಾರಿಗೆ ಈ ಸ್ಕಾಲರ್‌ಷಿಪ್ ಅನ್ನು ಹಂಚುವ ಅಧಿಕಾರವನ್ನು ಕೊಟ್ಟಿರುವುದರಿಂದ ಅವರು ತಮ್ಮ ಇಷ್ಟ ಬಂದಾಹಾಗೆ ಸ್ಕಾಲರ್‌ಷಿಪ್‌ಗಳನ್ನು ಹಂಚಿ ಅನೇಕರಿಗೆ ತೊಂದರೆಯನ್ನು ಕೊಟ್ಟಿದ್ದಾರೆ. ಹಿಂದೆ ವಿದ್ಯಾ ಇಲಾಖೆಯಲ್ಲಿ ಇದ್ದಹಾಗೆ ತಾಲ್ಲೂಕು ಸ್ಕಾಲರ್‌ಷಿಪ್ ಸಲಹಾ ಕಮಿಟಿಗಳನ್ನು ನೇಮಿಸಿ ಅವರ ಮುಖಾಂತರ ವಿದ್ಯಾರ್ಥಿ ವೇತನಗಳನ್ನು ಹಂಚುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಕೋಳಿ ಸಾಕಾಣಿಕೆಗೆ ಸಂಬಂಧಪಟ್ಟ ಹಾಗೆ ಕೆಲವು ವಿಚಾರಗಳನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕೋಳಿ ಸಾಕಾಣಿಕೆಗೆ ಬೇಕಾದ ಸಹಾಯವನ್ನು ಸರ್ಕಾರದವರು ದಲಿತ ವರ್ಗದವರಿಗೂ ಮತ್ತು ಕೆಲವು ಸವರ್ಣ ಹಿಂದೂಗಳಿಗೂ ಸಹಾಯ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಇದು ಯಾರೋ ಸಾಹುಕಾರರಿಗೆ ಹೋಗುತ್ತದೆ. ಎಲ್ಲರೂ ಸಮಾಜವಾದವನ್ನು ಎತ್ತಿ ಹೇಳುತ್ತಾರೆ. ಆದರೆ ದೇಶದಲ್ಲಿ ದಿನೇ ದಿನೇ ಸಾಹುಕಾರರು ಸಾಹುಕಾರರಾಗುತ್ತಿದ್ದಾರೆ. ಬಡವರು ದಿನೇ ದಿನೇ ಬಡವರಾಗುತ್ತಿದ್ದಾರೆ. ಇವರು ಎಂತಹ ಸಮಾಜವಾದವನ್ನು ಹೇಳುತ್ತಾರೆಯೋ ನನಗೆ ಅರ್ಥವಾಗುವುದಿಲ್ಲ. ನಾನು ಯಾವಾಗಲು ಬಡವರ ಸಹವಾಸದಲ್ಲಿ ಬದುಕುತ್ತಿದ್ದೇನೆ. ಆಹಾರ ಧಾನ್ಯವನ್ನು ಬಡವರಿಗೆ ಹಂಚುವ ಸಂದರ್ಭದಲ್ಲಿ ಅನೇಕ ಸ್ನೇಹಿತರು ದೊಡ್ಡ ದೊಡ್ಡ ಮುಖಂಡರು ಬಡವರಿಗೆ ಆಹಾರಧಾನ್ಯವನ್ನು ಹಂಚುತ್ತೇವೆಂದು ತೆಗೆದುಕೊಂಡು ಅದನ್ನು ಅವರಿಗೆ ಸರಿಯಾಗಿ ಹಂಚದೆ ಸುಮ್ಮನೆ ಊಹೆ ಮಾಡಿ ಲೆಕ್ಕವನ್ನು ಬರೆದು ಅದನ್ನು ಸರ್ಕಾರಕ್ಕೆ ತೋರಿಸಿದ್ದಾರೆ. ಈ ಸಾರಿ ಈ ಸಭೆ ಮುಗಿದ ಮೇಲೆ ಮಾನ್ಯ ಸದಸ್ಯರೆಲ್ಲರೂ ತಮ್ಮ ಕ್ಷೇತ್ರಗಳಿಗೆ ಹೋಗಿ ಅಲ್ಲಿ ವಿಷಯಗಳನ್ನು ತಿಳಿದುಕೊಂಡು ಬಂದು ಸರ್ಕಾರದಿಂದ ಬಡವರಿಗೆ

(ಶ್ರೀ ಆರ್. ಮುನಿಸ್ವಾಮಯ್ಯ)

ಸಿಕ್ಕತಕ್ಕ ಸಹಾಯದ ಬಗ್ಗೆ ಮುಂದಿನ ಬಡ್ಜೆಟ್ ಭಾಷಣದಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕೆಂದು ನಾನು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಅಂಥಾ ಒಂದು ಕಾರ್ಯವನ್ನು ಮಾಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ರೈತರಿಗೆ, ಇತರ ಜನಗಳಿಗೆ ಸರ್ಕಾರದ ಸಹಾಯ ಯಾವರೀತಿ ದೊರೆಯಬೇಕೆಂಬ ಬಗ್ಗೆ ಅವರಿಂದ ಸಲಹೆಗಳನ್ನು ಪಡೆದುಕೊಂಡು ಬಂದು ಈ ಸಭೆಯಲ್ಲಿ ತಿಳಿಸಬೇಕೆಂದು ನಾನು ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ. ಮಂತ್ರಿಮಂಡಲದವರು, ಅಧಿಕಾರಿಗಳು ಬಹಳ ಎಚ್ಚರಿಕೆಯಿಂದ ಕೆಲಸ ಮಾಡಿ ಸಮಾಜವಾದವನ್ನು ಕಾರ್ಯಕೃತಿಗಳಲ್ಲಿ ಸರಿಯಾಗಿ ನಡೆಸುವುದಕ್ಕೆ ಏರ್ಪಾಡು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಮತ್ತು ಮನೆಗಳನ್ನು ಕಟ್ಟುವುದಕ್ಕೆ ಹರಿಜನರಿಗೆ ಹಣ ಕೊಡಬೇಕೆಂದು ಹೇಳಿದ್ದಾರೆ. ಮೂರೂವರೆ ಕೋಟಿ ರೂಪಾಯಿಗಳನ್ನು ಸಾಲ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಕೆಲವು ಇಂಥ ಹರಿಜನರ ಸಹಕಾರಿ ಸಂಘಗಳಲ್ಲಿ ಸವರ್ಣ ಜಾತಿಯವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಆದರಿಂದ ಹರಿಜನರಿಗೆ ಹೆಚ್ಚಿನ ಅನುಕೂಲವಾಗುವುದಿಲ್ಲ. ಇದು ಕಾನೂನಿಗೆ ವಿರೋಧವಾಗಿದೆ. ಆದ್ದರಿಂದ ಹರಿಜನರನ್ನೇ ಅವುಗಳ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಖಾಸಗಿಯಾಗಿ ನಡೆಸುತ್ತಿರುವಂಥ ಪ್ರಾಥಮಿಕ ಪಾಠಶಾಲೆಗಳಿಗೆ, ಹೈಸ್ಕೂಲುಗಳಿಗೆ ಮತ್ತು ಮಾಧ್ಯಮಿಕ ಪಾಠಶಾಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆಯನ್ನನುಸರಿಸಿ ಸರ್ಕಾರದವರು ಸಾಕಷ್ಟು ಹಣವನ್ನು ಕೊಡುತ್ತಿದ್ದಾರೆ. ಆದರೆ ಬೆಂಗಳೂರು ಮುಂತಾದ ಪಟ್ಟಣಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಾಗಿ ತೋರಿಸಿ ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ಇದಕ್ಕೆ ಯಾರು ಕಾರಣರು ಎಂದು ನೋಡಿ, ಜಿಲ್ಲಾ ವಿದ್ಯಾಧಿಕಾರಿಗಳು ಜವಾಬ್ದಾರಿಯುತವಾಗಿ ಅದನ್ನು ಕಂಡು ಹಿಡಿದು, ನಷ್ಟ ಆಗದ ಹಾಗೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ರೈತರಿಂದ ವಾಟರ್ ರೇಟ್ ವಸೂಲು ಮಾಡಬೇಕೆಂದು ರೆವೆನ್ಯೂ ಅಧಿಕಾರಿಗಳಿಗೆ ಆಜ್ಞೆ ಕೊಟ್ಟಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಮತ್ತು 5-6 ತಾಲ್ಲೂಕುಗಳಲ್ಲಿ ನಾಲ್ಕು ವರ್ಷಗಳಿಂದ ಮಳೆ ಬಿದ್ದಿರಲಿಲ್ಲ; ಕೆರೆಗಳಲ್ಲಿ ನೀರು ಇರಲಿಲ್ಲ, ಭತ್ತ ಬೆಳೆಯಲಿಲ್ಲ, ರಾಗಿ ಬೆಳೆಯಲಿಲ್ಲ. ಇಂಥ ಸಂದರ್ಭದಲ್ಲೂ ನೀರಿನ ತೆರಿಗೆಯನ್ನು ಕೊಡಿ ಎಂದು ಹೇಳುತ್ತಿದ್ದಾರೆ. ನೀರನ್ನು ಉಪಯೋಗಿಸಲು ನೀರೇ ಇರಲಿಲ್ಲ. ನೀರಿನ ತೆರಿಗೆ ಕೇಳುವುದು ನ್ಯಾಯವಲ್ಲ. ಆದ್ದರಿಂದ ಇದನ್ನು ವಸೂಲು ಮಾಡಬಾರದು ಎಂದು ಕೂಡಲೇ ಸಂಬಂಧಪಟ್ಟವರಿಗೆ ಆದೇಶವನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—I want to impose time limit on speeches. Each Member will be allowed 10 minutes. If hon. Member Sri Channabasappa takes more than 10 minutes, to that extent the time allotted for his party will be curtailed.

†**Sri H. M. CHANNABASAPPA** (Periyapatna).—Sir, I have already submitted to you that if this fixation of time had been uniform from the beginning, I would have had no objection. I will try to be as brief as possible. I will not make any marathon speech. I crave your indulgence for any transgression.

Sir, the question of thanking the Governor for the brilliant speech that he has delivered on the 19th is now before us. Now the question arises : should this Governor make a speech at all and why should it come up for discussion for four days before this House ? I am sure the Constitution makers did have something serious behind it. They never meant that the Governor should present the statistical data that is presented to us because it is available in the Administration Reports of the Departments. Something more must have been meant by them, The Governor's office hitherto attracted practically no attention. He

was more or less a sort of a cage bird of the Raj Bhavan to be taken in procession whenever wanted either to the Republic Day Celebration or to the Independence Day Celebration or to the ceremonial functions and brought back in procession to be kept in the cage of the Raj Bhavan.

Sri K. PUTTASWAMY (Minister for Law, Labour and Parliamentary Affairs).—I request the hon. Member to avoid such a reference to the Governor.

Sri H. M. CHANNABASAPPA.—Well, Sir, I know my responsibilities and limitations and am well-advised on Constitutional matters, at least, as well-advised as my hon. friend Sri Puttaswamy.

Sri K. PUTTASWAMY.—All the same, he will go wrong.

Sri H. M. CHANNABASAPPA.—I do not go wrong. He sees with wrong eyes. Any way, I admit that he is a lawyer and I am not a lawyer.

The Governor's office attracted no importance. After the last General Elections, unfortunately or fortunately, very different situations have arisen all over the country. Now the Governor can no longer be a cage bird in the Raj Bhavan. He has got specific duties and functions which have been prescribed and he has to function accordingly. Whether this speech he has delivered on the 19th is the speech delivered by the Governor depicting the omissions and commissions in the performance of his duties under the Constitution or whether he is simply repeating like a parrot...........

Mr. SPEAKER.—Now the Constitutional position is well-known and in the light of that, I think the hon. Member Sri Channabasappa should offer his remarks. After all, Government of the day speaks through the Governor. I request the hon. member to understand that position.

Sri K. PUTTASWAMY.—The Government will take the whole responsibility.

Sri H. M. CHANNABASAPPA.—That is a wrong impression these people have. I am well within my limits in the debate. I can understand the feelings of the Hon. Minister, but I cannot help. That is a different matter. By no means I intend doing any harm or damage to the image of the Governor. In fact, I want the Governor to be projected more in the administration wherever law and order fails, mismanagement prevails and the well-being of the people of the country is at stake. The Governor has a duty to perform in this country. He cannot allow this kind of Government to function according to their whims. Rule of law must be ensured and where rule of law fails, and the rule of the jungle prevails, the Governor comes into the picture. So do they want the rule of the jungle to continue? From His Excellency Sri Dharma Vira, I expected a speech different from the one he delivered on the 19th I did expect, but there is excuse. He has been here only for a few months. He has yet to take time to understand the working of the

(SRI H. M. CHANNABASAPPA)

administration here. Next time, I am sure, my friends will see him in a different angle, in a different vision looking at things from a different eye.

ನಿಜವಾಗಿಯೂ ಕೂಡ ಪ್ರಜಾಪ್ರಭುತ್ವಕ್ಕೆ ವಿಷಮಕಾಲ ಬಂದಿಲ್ಲ. ಈ ಸರ್ಕಾರದ ನೀತಿ ನಿರೂಪಣೆಯನ್ನು 1969ನೇ ಸಾಲಿನಲ್ಲಿ ನಡೆದಂಥ ಮತ್ತು ಮುಂದೆ ನಡೆಯಬಹುದಾದಂಥ ರೂಪರೇಷೆಗಳನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಶಾಸನ ಸುವ್ಯವಸ್ಥೆಯ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಎರಡು ಕಡೆ ಹೇಳಿದ್ದಾರೆ. 1969 ರಲ್ಲಿ ಶಾಸನ ಸುವ್ಯವಸ್ಥೆಯು ಕೂಡ ಸರ್ವ ಸಾಮಾನ್ಯವಾಗಿ ಸಮಾಧಾನಕರವಾಗಿತ್ತು ಎಂದು ಹೇಳಿದ್ದಾರೆ. ನಿಜವಾಗಿಯೂ ನಮ್ಮ ರಾಜ್ಯದಲ್ಲಿ ಶಾಸನ ಸುವ್ಯವಸ್ಥೆ ಸರಿಯಾಗಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಒಂದು ನಿದರ್ಶನವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ತಾರೀಖು 10-12-1969 ರಲ್ಲಿ ತಿಪಟೂರು ನಗರದಲ್ಲಿ ಹಾಡು ಹಗಲಿನಲ್ಲಿಯೇ ಬೆಳಿಗ್ಗೆ 9 ಗಂಟೆಯಿಂದ ಹಿಡಿದು ಮಧ್ಯಾಹ್ನ 3 ಗಂಟೆಯವರೆಗೆ 8 ಹೋಟೆಲ್‌ಗಳ ಲೂಟಿಯಾಯಿತು. ಆ ಸಮಯದಲ್ಲಿ ಅಲ್ಲಿ ರಿಜರ್ವ್ ಪೋಲೀಸ್ ಇತ್ತು, ಎಲ್ಲಾ ಪೋಲೀಸ್ ಅಧಿಕಾರಿಗಳು ಇದ್ದರು. ಚಳುವಳಿಯಲ್ಲಿ ಭಾಗವಹಿಸಿದ್ದವರು ಹೋಟೆಲ್‌ಗಳನ್ನು ಲೂಟಿ ಮಾಡುತ್ತಿದ್ದರೂ ಕೂಡ ಪೋಲೀಸ್ ಅಧಿಕಾರಿಗಳು ನೋಡಿಕೊಂಡು ಇದ್ದರೇ ಹೊರತು ಪರಿಣಾಮಕಾರಿಯಾದಂಥ ಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಲಿಲ್ಲ. ಒಂದೂ ಮುಕ್ಕಾಲು ಮೈಲಿ ಸುತ್ತಳತೆ ಇರುವ ತಿಪಟೂರಿನಲ್ಲಿರುವ 8 ಹೋಟೇಲ್‌ಗಳನ್ನು ಅದೂ ಕೂಡ ಒಂದೇ ಮತಕ್ಕೆ ಸೇರಿದ ಹೋಟೇಲ್‌ಗಳನ್ನು ಒಂದು ಕೋಮಿನ ಚಳುವಳಿಗಾರರು ಲೂಟಿ ಮಾಡಿದ್ದಾರೆ. ಈ ವಿಷಯ ಪೋಲೀಸ್ ವರದಿಯಲ್ಲೂ ಕೂಡ ಇದೆ. ಸರ್ಕಾರ ಮುಂದೆ ಕ್ರಮ ತೆಗೆದುಕೊಳ್ಳಬಹುದೆಂದು ಕಾಣುತ್ತದೆ. ಸುಮಾರು 50 ಸಾವಿರ ರೂಪಾಯಿಗಳ ಸಾಮಾನುಗಳು ಲೂಟಿಯಾಗಿದೆ. ಗೃಹಮಂತ್ರಿಗಳೂ ಆದ ಮಾನ್ಯ ಮುಖ್ಯ ಮಂತ್ರಿಗಳಿಗೆ ಇಂತಹ ಅನ್ಯಾಯವಾಗಿದೆ ಇದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕೆಂದು ನಾನು ಒಂದು ಕಾಗದ ಬರೆದರೆ ಅದಕ್ಕೆ ಇವತ್ತಿನವರೆಗೂ ಕೂಡ ಉತ್ತರ ಬಂದಿಲ್ಲ. ಸರಿಯಾದ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಮಾನ್ಯ ಮುಖ್ಯಮಂತ್ರಿಗಳು ತಾರೀಖು 10-1-1970 ರಲ್ಲಿ ತಮ್ಮ ಮೂರು ಜನ ಸಹೋದ್ಯೋಗಿಗಳೊಡನೆ ತಿಪಟೂರಿಗೆ ಬಂದು ಅಲ್ಲಿಯ ಟಿ. ಬಿ. ಯಲ್ಲಿ ಅರ್ಧ ಗಂಟೆ ತಂಗಿದ್ದರು. ಅವರು ಅಲ್ಲಿಗೆ ಬರುವಂಥ ಟೂರ್ ಪ್ರೋಗ್ರಾಮನ್ನು ಅಲ್ಲಿಯ ಶಾಸನ ಸಭಾ ಸದಸ್ಯರಿಗೆ ತಿಳಿಸಿರಲಿಲ್ಲ. ಅಲ್ಲಿಗೆ ಬಂದ ನಂತರ ಪೋಲೀಸರು ಯಾರಮೇಲೆ ದೂರು ಮಾಡಿದ್ದರೋ ಅಂತಹವರನ್ನೇ ಅಂದರೆ ಅಲ್ಲಿಯ ಒಂದು ಕೋಮಿನ ಅತಿ ದೊಡ್ಡ ಶ್ರೀಮಂತರನ್ನು ಕರೆಸಿಕೊಂಡು ಈ ಹೋಟೆಲ್ ಲೂಟಿಯ ಹಿನ್ನೆಲೆಯಲ್ಲಿ ಅವರಿಗೆ ಇನೂ ಹೆಚ್ಚಿನ ಬೆಂಬಲ ಕೊಟ್ಟು ಬಂದಿದ್ದಾರೆಂದು ಕೇಳಿದ್ದೇನೆ. ನಿಜವಾಗಿಯೂ ಶಾಸನ ಸುವ್ಯವಸ್ಥೆ ಈ ರಾಜ್ಯದಲ್ಲಿ ಇದೆಯೇ ಎಂದು ಕೇಳುತ್ತಿದ್ದೇನೆ. ಮುಖ್ಯಮಂತ್ರಿಗಳು ತಾವೇ ಕರ್ಣಾಟಕಕ್ಕೆ ಚಕ್ರವರ್ತಿ ಸಾರ್ವಭೌಮ ಎಂದು ತಿಳಿದುಕೊಂಡಿರುವಂತೆ ಕಾಣುತ್ತದೆ. ಮುಖ್ಯ ಮಂತ್ರಿಗಳು ಟೂರ್ ಹೋದಕಡೆಗಳಲ್ಲಿ ತಮಗೆ ಬೇಕಾದವರನ್ನು ಕರೆಸಿಕೊಂಡು ನಾನೇ ಮುಖ್ಯ ಮಂತ್ರಿಯಾಗಿ ಮುಂದುವರೆಯುತ್ತೇನೆ, ನೀವು ಹೆದರಬೇಡಿ ಎಂದು ಧೈರ್ಯ ಕೊಟ್ಟು ಬರುತ್ತಿದ್ದಾರೆಂದು ಕೇಳಿದ್ದೇನೆ. ಸಾಮಾನ್ಯ ಜನತೆ ಕೂಡ ಇದನ್ನು ಹೇಳುತ್ತಿದೆ. ನನಗೆ ಸರ್ಕಾರದ ಬಗ್ಗೆ ಗೌರವ ಇದೆ. ಆದರೆ ಸರ್ಕಾರದಲ್ಲಿರುವ ಮಂತ್ರಿಗಳು ಮಾಡುತ್ತಿರುವ ಕೆಲಸದ ಬಗ್ಗೆ ಇವತ್ತು ಎಲ್ಲರೂ ವಿಚಾರ ಮಾಡಬೇಕಾಗಿದೆ. ಇವರು ಹೋದ ಕಡೆಗಳಲ್ಲೆಲ್ಲಾ ತಮ್ಮ ಅಧಿಕಾರದ ಬಗ್ಗೆ ಪ್ರಚಾರ ಮಾಡುತ್ತಿದ್ದಾರೋ ಏನೋ ಎಂದು ವಿಚಾರ ಮಾಡಬೇಕಾಗಿದೆ. ನಮ್ಮ ತಿಪಟೂರಿನಲ್ಲಿ ನಡೆದಂಥ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅಲ್ಲಿ ಬಹಳ ಲುಕ್ಸಾನಾಗಿದೆ. ಪ್ರತಿಯೊಬ್ಬರ ಆಸ್ತಿ ಪಾಸ್ತಿಗಳನ್ನು ಕಾಪಾಡುವ ಜವಾಬ್ದಾರಿ ಸರ್ಕಾರಕ್ಕೆ ಇರುತ್ತದೆ. ಯಾರಾದರೂ ತಮ್ಮ ಆಸ್ತಿಪಾಸ್ತಿಯನ್ನು ಕಳೆದುಕೊಂಡಾಗ ಅಂತಹವರಿಗೆ ಪರಿಹಾರ ಕೊಡುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಆದರೆ ತಿಪಟೂರಿನಲ್ಲಿ ಆದ ಲುಕ್ಸಾನಿನ ಬಗ್ಗೆ ಪರಿಹಾರ ಕೊಡುವ ಬಗ್ಗೆ ಸರ್ಕಾರ ವಿಚಾರ ಮಾಡಿದೆಯೇ, ಆ ಬಗ್ಗೆ ವ್ಯವಹಾರ ನಡೆದಿದೆಯೇ ಎಂಬ ಬಗ್ಗೆ ನನಗೆ ತಿಳಿದ ಮಟ್ಟಿಗೆ ಯಾವ ವಿಚಾರವೂ ತಿಳಿದುಬಂದಿಲ್ಲ. ಶಾಸನ ಸುವ್ಯವಸ್ಥೆಯ ಪೋರ್ಟ್‌ಫೋಲಿಯೋವನ್ನು ಮುಖ್ಯಮಂತ್ರಿಗಳೇ ಇಟ್ಟುಕೊಂಡಿದ್ದಾರೆ. ಮತ್ತು ಈ ಮೂಲಕ ಮುಖ್ಯ ಮಂತ್ರಿಗಳು ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳುವುದಕ್ಕೆ ಮತ್ತು ಈ ದೇಶದ ಜನರನ್ನು ಹೆದರಿಸುವುದಕ್ಕೆ ಶಾಸನ ಸುವ್ಯವಸ್ಥೆಯನ್ನು ಬಳಸುತ್ತಿದ್ದಾರೆ. ಈ ಕಾರಣದಿಂದ ರಾಜ್ಯದ ಜನರು ಮಾನಮರ್ಯಾದೆಯಿಂದ ಜೀವನ ಮಾಡುವುದು ಕಷ್ಟವಾಗಿದೆ. ಈ ಆಡಳಿತ ಯಂತ್ರವನ್ನು ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳಲು ಇಟ್ಟುಕೊಂಡಿದ್ದಾರೆಯೇ ವಿನಃ ಈ ರಾಜ್ಯದ ಜನರ ರಕ್ಷಣೆ ಮಾಡುವುದಕ್ಕೆ ಇಟ್ಟಿಲ್ಲ ಎಂದು ಖಂಡಿತವಾಗಿ ಹೇಳಬಹುದು.

ಇಂತಹ ಸರಕಾರ ಈ ದೇಶದಲ್ಲ ಇನ್ನು ಮುಂದೆ ಬರುವುದಿಲ್ಲ. ಹಿಂದೆ ಇಂತಹ ಆಡಳಿತ ಇರಲಿಲ್ಲ. ಇಂತಹ ಒಂದು ನೀತಿ ನಿಯಮ ಇಲ್ಲದಿರತಕ್ಕ ಸರಕಾರವನ್ನು ನಾವು ನೋಡತಕ್ಕ ಸನ್ನಿವೇಶ ಬಂದಿದೆ

(ಶ್ರೀ ವಿ. ಎಲ್. ಶಿವಪ್ಪ)

ಎಂಬುದನ್ನು ಸಂಕಟದಿಂದ ಹೇಳಬೇಕಾಗಿದೆ. ಆಮೇಲೆ ಆಡಳಿತ ಬಹಳ ಚೆನ್ನಾಗಿ ನಡೆಯುತ್ತಿದೆ ಎಂದು ರಾಜ್ಯಪಾಲರು ಹೇಳಿದ್ದಾರೆ. ಕೆಲಸಗಳನ್ನು ಜಾಗ್ರತೆ ಮಾಡತಕ್ಕ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಮತ್ತು ಇದಕ್ಕೆ ಬೇಕಾದಂಥ ಸಮಿತಿಗಳು ನೇಮಕವಾಗಿದೆ ಎಂದು ಅವರ ಭಾಷಣದಲ್ಲಿ ಉಲ್ಲೇಖಿಸಲಾಗಿದೆ. ಇದೆಲ್ಲಾ ನೋಡಿದರೆ ಸರಕಾರ ರಾಜಕೀಯ ದೃಷ್ಟಿ ಬಿಟ್ಟು ದೇಶದ ಆಗುಹೋಗುಗಳ ಬಗ್ಗೆ ಆಗಲಿ ಅಭಿವೃದ್ಧಿ ಪಡಿಸತಕ್ಕ ವಿಷಯಗಳನ್ನು ವಿಮರ್ಶೆ ಮಾಡುವುದಾಗಲಿ ಮಾಡುತ್ತಾ ಇಲ್ಲ ಎಂದು ಧಾರಾಳವಾಗಿ ಹೇಳಬಹುದು. ನಾನು ಶಾಸನ ಸಭೆಯ ಸದಸ್ಯನಾಗಿ ಒಬ್ಬ ವಿದ್ಯಾ ಇಲಾಖೆಯ ನೌಕರನ ವಿಷಯ ಕಾಗದ ಬರೆದಿದ್ದೇನೆ. ಅವನು ನಾಲ್ಕೈದು ವರ್ಷಗಳಿಂದ ಒಂದೇ ಸ್ಥಳದಲ್ಲಿ ಇದ್ದಾನೆ. ಅವನನ್ನು ದಯಮಾಡಿ ವರ್ಗಮಾಡಿ ಎಂದು ಹೇಳಿದರೆ ಆ ಕಾಗದವನ್ನು ಸೆಕ್ರೆಟರಿಯೇಟ್‌ಗೆ ಕಳುಹಿಸಿದ್ದೇವೆ ಎಂದು ಹೇಳಿದರು. 2-3 ವರ್ಷ ಸರಕಾರಿ ನೌಕರರು ಒಂದೇ ಕಡೆ ಇರಬಾರದೆಂದು ನೀತಿ ಇದ್ದರೂ ನಾಲ್ಕೈದು ವರ್ಷಗಳಾದರೂ ಅವನನ್ನು ವರ್ಗ ಮಾಡಿರೆಂದರೆ ಅವನು ತಪ್ಪಿತಸ್ಥನು ಅಲ್ಲ, ಈ ದೃಷ್ಟಿಯಿಂದ ಆತನನ್ನು ವರ್ಗಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಒಬ್ಬ ಶಾಸನ ಸಭೆಯ ಸದಸ್ಯ ಒಬ್ಬ ಅಧಿಕಾರಿಯಮೇಲೆ ಬರೆದ ಕಾಗದ ಈ ರೀತಿ ವಿತರಣೆ ಆಗುವುದಾದರೆ ಸಾಮಾನ್ಯ ಮನುಷ್ಯ ದೂರು ಕೊಟ್ಟರೆ ಅದು ಎಷ್ಟರ ಮಟ್ಟಿಗೆ ಕಾರ್ಯಗತವಾಗುತ್ತದೆ ಎಂದು ನಾವು ಊಹಿಸಬಹುದು. ಗೌವರ್ನರ್‌ರವರು ಹೊಸಬರು ಆಗಿರುವುದರಿಂದ ಮೈಸೂರು ಸರಕಾರದಲ್ಲಿ ಏನೇನು ನಡೆಯುತ್ತಾ ಇದೆ ಎನ್ನುವುದು ಅವರಿಗೆ ಗೊತ್ತಿಲ್ಲದೆ ಇರುವುದರಿಂದ ಅವರು ಆಡಳಿತದ ವಿಲೇವಾರಿ ಬಗ್ಗೆ ಆ ರೀತಿ ಹೇಳಿರಬಹುದೆಂದು ಕಾಣುತ್ತದೆ.

ಸ್ವಾಮಿ, ಈ ಭೂಸುಧಾರಣೆ ಮತ್ತು ರೆವೆನ್ಯೂ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ 1957ನೇ ಇಸವಿಯಿಂದ ಭೂಸುಧಾರಣೆ ಕಾನೂನು ಜಾರಿಗೆ ತರುವುದಕ್ಕೆ ಶಕ್ತಿ ಇಲ್ಲದೆ ಇರತಕ್ಕ ಸಂದರ್ಭದಲ್ಲಿ ಆತುರಆತುರವಾಗಿ ಆರ್ಡಿನೆನ್ಸ್ ಪಾಸ್ ಮಾಡಿಸಿ ಈ ಒಂದು ಭೂಸುಧಾರಣೆಯನ್ನು ನಮ್ಮ ಸರಕಾರ ಈಗ ತರುತ್ತಾ ಇದೆ. ಇದನ್ನು ನೋಡಿದರೆ ಬರೇ ಭೂಮಿ ಮಾತ್ರ ಸುಧಾರಣೆ ಆಗಬೇಕು, ಆದರೆ ಪಟ್ಟಣಗಳಲ್ಲಿ ಇರತಕ್ಕ ಜನರು ಆಸ್ತಿಪಾಸ್ತಿಗಳನ್ನು ಕ್ರೋಢೀಕರಿಸಿ ಅನೇಕ ರೀತಿಯಲ್ಲಿ ಸಂಪಾದನೆ ಮಾಡಿದರೆ ಅದಕ್ಕೆ ಮಿತಿ ಇಲ್ಲ. ಆದರೆ ಯಾವ ರೈತ ದುಡಿದು ಕಷ್ಟಪಟ್ಟು ಭೂಮಿ ಇಟ್ಟುಕೊಂಡಿದ್ದಾನೋ ಅದಕ್ಕೆ ಒಂದು ಮಿತಿ ಇರಬೇಕೆಂದು ಮಾಡುತ್ತಿದ್ದಾರೆ. ಬ್ಲಾಕ್ ಮಾರ್ಕೆಟ್‌ನಲ್ಲಿ ಸಂಪಾದನೆ ಮಾಡಿರತಕ್ಕ ಆಸ್ತಿಗೆ ಮಿತಿ ಹಾಕಿಲ್ಲ. ಇದನ್ನು ನೋಡಿದರೆ ರೈತವರ್ಗ ಏನು ಇದೆಯೋ ಅದಕ್ಕೆ ಮಹದುಪಕಾರ ಮಾಡುತ್ತೇವೆ ಎಂದು ಹೇಳಿ, ಶ್ರೀಮಂತ ವರ್ಗವನ್ನು ಉಳಿಸುವ ಸಲುವಾಗಿ ತಂದಿರತಕ್ಕ ಕಾನೂನೇ ವಿನಹ ದೇಶದಲ್ಲಿ ಸಮಾಜವಾದವನ್ನು ಸ್ಥಾಪನೆ ಮಾಡಿ ಬಡತನ ಹೋಗಲಾಡಿಸಿ ಮನುಷ್ಯ ಸರಿಸಮನಾಗಿ ತಲೆ ಎತ್ತಿ ಬಾಳತಕ್ಕ ಸನ್ನಿವೇಶ ಉಂಟುಮಾಡುವುದಕ್ಕೆ ಈ ಕಾನೂನಿನಿಂದ ಅವಕಾಶ ಇಲ್ಲ ಎಂದು ಧಾರಾಳವಾಗಿ ಹೇಳಬಹುದು.

ಸ್ವಾಮಿ, ಸಹಕಾರ ಇಲಾಖೆಯ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಆದರೆ ಸಹಕಾರ ಮುಖಾಂತರ ಏನೇನು ಆಗಬೇಕಾಗಿತ್ತೊ ಅದು ಆಗಲಿಲ್ಲ. ಲಕ್ಷ ಲಕ್ಷ ರೂಪಾಯಿಗಳು ಒಂದೊಂದು ಸಂಸ್ಥೆಗಳಲ್ಲಿ ದುರುಪಯೋಗವಾಗಿದೆ, ಮೋಸವಾಗಿದೆ ಎಂದು ಶಾಸನ ಸಭೆಯಲ್ಲಿ ಹೇಳಿದರೆ ಅದಕ್ಕೆ ಸರಕಾರದವರು ಕೊಡತಕ್ಕ ಉತ್ತರ ನೋಡಿದರೆ, ತಮ್ಮ ಜನರನ್ನು ತೃಪ್ತಿಪಡಿಸುವುದಕ್ಕೋಸ್ಕರ ಈ ಸಹಕಾರ ಸಂಸ್ಥೆಗಳ ಆಡಳಿತ ನಡೆಸುತ್ತಿದ್ದಾರೆಯೋ ಏನು ಎಂದು ಅನುಮಾನವಾಗಿದೆ. ನಾನು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷನಾಗಿ ಎಂಟು ವರ್ಷ ಕೆಲಸ ಮಾಡಿದ್ದೇನೆ. ಆಗ ನಾನು ಐದು ಲಕ್ಷ ರೂಪಾಯಿಗಳ ನಿವ್ವಳ ನಫೆ ಸಂಪಾದನೆ ಮಾಡಿಕೊಟ್ಟೆ. ನಾನು ಕಾಂಗ್ರೆಸ್ ಬಿಟ್ಟ ಮೇಲೆ ಈ ಸೊಸೈಟಿ ಬಗ್ಗೆ ಅನೇಕ ಸಾರಿ ತನಿಖೆ ನಡೆಸಿ ಐದು ವರ್ಷದ ಆಡಿಟ್ ಮಾಡಿಸಿ ಏನಾದರೂ ಮಾಡಿ ನನ್ನನ್ನು ಇನ್‌ವಾಲ್ವ್ ಮಾಡಿ ಶಿಕ್ಷೆ ಮಾಡಿಸಿಬಿಟ್ಟು ನನಗೆ ಕೆಟ್ಟ ಹೆಸರು ತರಬೇಕೆಂದರೆ ಬೇಕಾದಷ್ಟು ಪ್ರಯತ್ನ ಮಾಡಿದರು. ಅದರಿಂದ ಏನೂ ಆಗಲಿಲ್ಲ. ಆದುದರಿಂದ ಸಹಕಾರ ಸಂಸ್ಥೆಗಳಲ್ಲಿ ಯೋಗ್ಯರು ಆದವರು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಲಕ್ಷೋಪಲಕ್ಷ ರೂಪಾಯಿ ತಿಂದು ಓಡಾಡುವ ಜನರಿಗೆ ಸಹಕಾರ ಸಂಸ್ಥೆಗಳನ್ನು ಮಾಡಿಕೊಟ್ಟಿದ್ದಾರೆಯೇ ವಿನಹ ಮತ್ತೆ ಯಾವುದಕ್ಕೂ ಅಲ್ಲ ಎಂದು ಗೊತ್ತಾಗುತ್ತದೆ.

ಮತ್ತೊಂದು ವಿಚಾರ ತಮ್ಮ ಗಮನಕ್ಕೆ ತರಬೇಕಾಗಿದೆ. ಒಂದು ಸಂಸ್ಥೆಯಲ್ಲಿ 1800 ರೂಪಾಯಿಗಳ ಸಾಲ ತೆಗೆದುಕೊಂಡಿದ್ದೇನೆ. ಎಲ್ಲಿ ಹುಡುಕಿದರೂ ಇದಕ್ಕಿಂತ ಪಾಪದ ಕೆಲಸ ನಾನು ಏನು ಮಾಡಲಿಲ್ಲ. ಈ ಸಾಲ ಐ. ಪಿ. ಸೆಟ್‌ಗಾಗಿ ತೆಗೆದುಕೊಂಡಿದ್ದೇನೆ. ಮಿನಿಸ್ಟರ್ ಈ ಸಂಬಂಧ

ವಾಗಿ ರಿಪೋರ್ಟ್ ತರಿಸಿಕೊಂಡಿದ್ದಾರೆ. ಅವರು ಏನು ಮಾಡುತ್ತಾರೋ ಗೊತ್ತಿಲ್ಲ. ಸಮಾಜವಾದ ನೀತಿಯನ್ನು ನಿರೂಪಣೆ ಮಾಡುವ ಮಂತ್ರಿಗಳು ಒಬ್ಬ ಮನುಷ್ಯನಿಗೆ ಕಿರುಕುಳ ಕೊಟ್ಟು ವ್ಯವಹಾರ ಮಾಡಬೇಕೆಂದರೆ ಸಹಕಾರ ಸಂಸ್ಥೆಗಳ ಬೆಳವಣಿಗೆ ಆಗುತ್ತದೆಯೇ? ನಾವು ಈ ಸಹಕಾರ ಸಂಸ್ಥೆಗಳಿಗಾಗಿ ಕೋಟಿ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಸಮಾಜ ಸೇವೆ ಮಾಡುವ ದೃಷ್ಟಿಯಿಂದ ಈ ಸಹಕಾರ ಸಂಸ್ಥೆಗಳನ್ನು ಬೆಳಸದೆ ಇದ್ದರೆ ರೈತವರ್ಗದಲ್ಲಿ ಸಮಾಜವಾದ ದೃಷ್ಟಿಯನ್ನು ತರುವ ಪ್ರಯತ್ನ ಕುಂಠಿತವಾಗುತ್ತದೆ. ಸಮಾಜವಾದವನ್ನು ಸಹಕಾರ ಮುಖಾಂತರ ಅಲ್ಲದೆ ಮತ್ತೆ ಯಾವ ಮುಖಾಂತರವಾದರೂ ತಂದು ರೈತವರ್ಗವನ್ನು ಅಭಿವೃದ್ಧಿಪಡಿಸುವುದಕ್ಕಾಗುವುದಿಲ್ಲ ಎಂದು ತಮ್ಮ ಮುಖಾಂತರ ಸಭೆಯ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ನೀರಾವರಿ ಕಾಮಗಾರಿಗಳ ಬಗ್ಗೆ ನೋಡಿದಾಗ 69–70ನೇ ಸಾಲಿನಲ್ಲಿ 11 ಕೋಟಿ 75 ಲಕ್ಷ ರೂಪಾಯಿಗಳನ್ನು ನೀರಾವರಿ ಯೋಜನೆಗಳಿಗಾಗಿ ಇಟ್ಟಿದ್ದರು. ಜಾಸ್ತಿ 7–8 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಇದರಲ್ಲಿ ಉಲ್ಲೇಖಿಸಲಾಗಿದೆ. ಇದರಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕೆಂದು ಇದ್ದೇನೆ. ಈ ರೀತಿ 19 ಕೋಟಿ ರೂಪಾಯಿಗಳು ನೀರಾವರಿಗಾಗಿ ಖರ್ಚುಮಾಡತಕ್ಕ ದೇಶದಲ್ಲಿ ತಿಪಟೂರು ತಾಲ್ಲೂಕಿಗೆ ಎಷ್ಟು ಖರ್ಚಾಗುತ್ತಿದೆ ಎಂದು ನೋಡಬೇಕು. ತಿಪಟೂರು ತಾಲ್ಲೂಕಿನಲ್ಲಿ ಯಾವುದೋ ಕಾಲದಲ್ಲಿ ಕಟ್ಟಿದಂತಹ ಕೆರೆಗಳು ಇವೆ. ಅವು ಜೀರ್ಣೋದ್ಧಾರ ಆಗಿಲ್ಲ. ಇವಕ್ಕೆ ಏರಿ ಇಲ್ಲ, ಕೋಡಿ ಇಲ್ಲ; ಬಹಳ ಅವ್ಯವಸ್ಥೆಯಾಗಿದೆ ಎಂದು 8–10 ವರ್ಷಗಳಿಂದ ಹೇಳಿದರೂ ಒಂದು ಸಾರಿಯೂ ಕೂಡ ರಿಪೇರಿ ಆಗಿಲ್ಲ. ಅಲ್ಲಿ ಶೇಕಡಾ ಮೂರಕ್ಕಿಂತ ಹೆಚ್ಚು ನೀರಾವರಿ ಪ್ರದೇಶ ಇಲ್ಲ. ಅಲ್ಲಿಗೆ ವಾರ್ಷಿಕ ರಿಪೇರಿ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ 8–10 ವರ್ಷಗಳಲ್ಲಿ ಯಾವ ರೀತಿ ಅನುಕೂಲವನ್ನೂ ಮಾಡಿಕೊಟ್ಟಿಲ್ಲ. ಹೀಗೆ 10 ಕೋಟಿ ರೂಪಾಯಿ ಖರ್ಚಾಗುತ್ತಾ ಇರುವಾಗ ಇಲ್ಲಿ ಯಾವ ಕೆಲಸವನ್ನೂ ಮಾಡದೆ ಇರುವುದನ್ನು ನೋಡಿದರೆ ಈ ಪ್ರದೇಶದ ಬಗ್ಗೆ ಬೇಧಭಾವ ಇದೆ ಎಂದು ಹೇಳಬೇಕಾಗುತ್ತದೆ. 19 ಕೋಟಿ ಖರ್ಚು ಮಾಡತಕ್ಕ ಸಂದರ್ಭ ಏನು ಇದೆ, ಈ ಬಗ್ಗೆ ಪ್ರಿವಿಲೇಜ್ ಮೋಷನ್ ಮೂವ್ ಮಾಡಿದ್ದಾರೆ. ಈ ಮಾನ್ಯ ಸಭೆಯ ಮುಂದೆ ಅದು ನಾಳೆ ಬರಬಹುದು. ಎಲ್ಲಾ ಪ್ರದೇಶದ ಬೆಳವಣಿಗೆ ಒಂದೇ ರೀತಿಯಾಗಿ ನೋಡಿಕೊಂಡು ಹೋಗದಿದ್ದರೆ ಮಾತು ಬರುತ್ತದೆ. ಅದನ್ನು ನೋಡಿಕೊಳ್ಳುವುದು ಸರಕಾರದ ಕರ್ತವ್ಯ. 10–12 ವರ್ಷಗಳಿಂದ ದೇಶದ ಪ್ರಗತಿ ಕುಂಠಿತವಾಗುತ್ತಿದೆ ಎಂದು ಅನಿಸುತ್ತಿದೆ. 1955–56ರಲ್ಲಿ ಸ್ಟೇಟ್ ರೀಆರ್ಗನೈಸೇಶನ್ ಕಮಿಟಿಯ ರಿಪೋರ್ಟ್ ಏನು ಬಂತು, ಆಗ ಮುಖ್ಯಮಂತ್ರಿಯಾಗಿದ್ದ ಹನುಮಂತಯ್ಯನವರು 10 ವರ್ಷಗಳ ಸಮಯ ಇಡೀ ಮೈಸೂರು ದೇಶದ ಕೆಲಸಕಾರ್ಯಗಳು ಕುಂಠಿತವಾಗುವುದಿಲ್ಲ. ಮತ್ತು ಅನ್ಯಾಯವಾಗುವುದಿಲ್ಲ ಎಂದು ಹೇಳಿದರು. ಅದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ಈ ದಿವಸ ನೋಡಿದರೆ ಬೇರೆಯೇ. ಆಗ ಅನೇಕ ಜನರು ಹನುಮಂತಯ್ಯನವರು ಹೇಳಿದ್ದಕ್ಕೆ, ನಮಗೆ ಕರ್ಣಾಟಕ ಬೇಡ ಎಂದು ಹೇಳಿದ್ದರು. ಆದರೆ, ಹನುಮಂತಯ್ಯನವರು ಮತ್ತು ನಮ್ಮ ಜನರು ಅಷ್ಟು ಸಂಕುಚಿತ ಮನೋಭಾವದ ಜನರಲ್ಲ. ಹನುಮಂತಯ್ಯನವರು ಸಾರ್ವಭೌಮನಾಗಿ ಕೀರ್ತಿಶಾಲಿಯಾಗುತ್ತೇನೆಂದು ತಿಳಿದುಕೊಂಡಿದ್ದರು. ಅಂಥ ಮುಖ್ಯಮಂತ್ರಿಯಾಗಿದ್ದ ಮನುಷ್ಯ ಕೊಟ್ಟ ಆಶ್ವಾಸನೆಯನ್ನು ಈಗಿನ ಸರ್ಕಾರ ಎಷ್ಟು ನಡೆಸಿಕೊಂಡು ಬಂದಿದೆ? 10 ವರ್ಷಗಳಿಂದ ಒಂದು ಕೆರೆ ಕೂಡ ರಿಪೇರಿಯಾಗಿಲ್ಲ. ನಮ್ಮಲ್ಲಿ ಒಂದು ತೆಂಗಿನ ಗಿಡಗಳಿಗಾಗಿ ಅಣೆಕಟ್ಟನ್ನು ಕಟ್ಟಬೇಕೆಂದು ನಾವು 6 ತಾಲ್ಲೂಕಿನ ಜನರು ಮುಖ್ಯಮಂತ್ರಿಯವರಿಗೆ ಕೇಳಿಕೊಂಡಿದ್ದೇವೆ ಮತ್ತು ಪತ್ರ ಕೂಡ ಬರೆದಿದ್ದೇವೆ. ಆ ಕಾಗದ ಏನಾಯ್ತು, ಅದು ತಲುಪಿದೆಯೋ ಇಲ್ಲವೋ ಎಂದು ಗೊತ್ತಿಲ್ಲ ಮತ್ತು ಅದನ್ನು ಕಟ್ಟುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿಲ್ಲ. ಇದನ್ನು ಮೊದಲು ಪಿ. ಡಬ್ಲ್ಯು. ಡಿ. ಯವರು ಮಾಡುತ್ತಿದ್ದರು. ಈಗ ಇದನ್ನು ಸಾಯಿಲ್ ಕನ್ಸರ್ವೇಷನ್ ಮುಖಾಂತರ ಇರಿಗೇಷನ್ ಮಂತ್ರಿಯವರಿಗೆ ಕೊಡುತ್ತಿದ್ದಾರೆಂದು ಕಾಣುತ್ತದೆ. ಅದರ ಮುಖಾಂತರ ಕೂಡ ಈವರೆಗೂ ಒಂದೂ ಮಾಡಿಲ್ಲ. ಇದರಿಂದ ಆ ತಾಲ್ಲೂಕುಗಳ ಆರೂವರೆ ಲಕ್ಷ ಜನರಿಗೆ ತೊಂದರೆ ಆಗುತ್ತದೆ. ಇದನ್ನೆಲ್ಲಾ ನೋಡಿದರೆ, ಏನೋ ನನ್ನ ಜಿಲ್ಲೆಗೆ ಮಾಡಬೇಕು, ಅಲ್ಲಿಯ ಜನರು ನನ್ನನ್ನು ಅನುಸರಿಸಿಸಬೇಕು ಮತ್ತು ಇದರಿಂದ ರಾಜ್ಯದ ಆಡಳಿತ ನಡೆಸಬೇಕೆಂದು ಮಾಡತಕ್ಕ ಮುಖ್ಯಮಂತ್ರಿಯವರನ್ನು ನೋಡಿದಾಗ ನಮ್ಮ ಮನಸ್ಸಿಗೆ ಖೇದವುಂಟಾಗುತ್ತದೆ. ಇದರಿಂದ ಇವತ್ತು ಯಜಮಾನ ಇಲ್ಲದಿರತಕ್ಕ ಮನೆಯಲ್ಲಿ ಅಳಿಯನು ತನ್ನ ಸ್ಥಾನಮಾನವನ್ನು ಬಯಸಿದಂತೆ ನಮ್ಮ ದೇಶದ ಪರಿಸ್ಥಿತಿ ಇದೆಯೆಂದು ಕಾಣುತ್ತದೆ. ವಯಸ್ಸಿಗೆ ಬಂದ ಮಕ್ಕಳು ಮನೆಯಲ್ಲಿ ಇರುವಾಗ ಅದರ ಪರಿಣಾಮ ಏನಾಗುತ್ತದೆ, ಅದನ್ನು ನಾವು ಯೋಚನೆ ಮಾಡಬೇಕು. ಆದ್ದರಿಂದ ಎಲ್ಲಾ ಭಾಗದ ಜನರು ಹೇಳುತ್ತಿರುವುದು ನಿಜವೇ, ಸುಳ್ಳೇ ಎಂದು ನೋಡಿ ಅಲ್ಲಿಯ ಕೆಲಸಕಾರ್ಯಗಳನು ಮಾಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಲ್ ನಾರಾಯಣಸ್ವಾಮಿ (ಶ್ರೀನಿವಾಸಪುರ).—ಸನ್ಮಾನ್ಯ ಸಭಾಧ್ಯಕ್ಷರೇ, 60 ಪುಟದಲ್ಲಿ ಅಂದವಾಗಿ ಅಚ್ಚುಮಾಡಿಸಿದ ಭಾಷಣವನ್ನು ಧೀರ್ಘ ಕಾಲ ಓದಿ ಪಟ್ಟ ಕಷ್ಟಕ್ಕಾಗಿ ಮಾನ್ಯ ರಾಜ್ಯಪಾಲರವರನ್ನು ವಂದಿಸುತ್ತೇನೆ. ಈಗ ರಾಜಕೀಯದ ವಾತಾವರಣವು ಒಂದು ವಿಷಮ ಸ್ಥಿತಿಯಲ್ಲಿದೆ ಎಂದೂ ಅವರು ಸಾರಿದ್ದಾರೆ, ಆಡಳಿತ ಪಕ್ಷವು ಎರಡಾಗಿ ಸಮಾಜವಾದವನ್ನು ಸ್ಥಾಪನೆ ಮಾಡುವುದೇ ನಮ್ಮ ಗುರಿ ಎಂದು ಹೇಳುತ್ತಿದ್ದಾರೆ. ಮದ್ರಾಸಿನ ಆವಡಿಯಲ್ಲಿ ನಿರ್ಧಾರ ಕೈಗೊಂಡರೂ ಸಹ, 22 ವರ್ಷಗಳಿಂದಲೂ ಈ ದಿಸೆಯಲ್ಲಿ ಏನು ಮಾಡಿದೆ ಎಂದು ನೋಡಿದರೆ, ಇವತ್ತು ಪಕ್ಷ ಇಬ್ಭಾಗವಾಗಿ, ಒಬ್ಬರಿಗೊಬ್ಬರು ಪೈಪೋಟಿಯಲ್ಲಿ ಹೇಳುತ್ತಿರುವ ಸಮಾಜವಾದದ ಕೂಗನ್ನು ನಾವೆಲ್ಲಾ ಕೇಳುತ್ತಿದ್ದೇವೆ. ಒಟ್ಟಿನಲ್ಲಿ ನೋಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆಂದು ಆಶೆಪಡಬೇಕಾಗಿದೆ. ಆದರೆ ಅದು ಕೃತಿಗೆ ಇಳಿಯುತ್ತದೋ, ಇಲ್ಲವೋ ಎಂಬುದು ಅನುಮಾನಾಸ್ಪದ. ಅದನ್ನು ಕಾದು ನೋಡಬೇಕಾಗಿದೆ. ಸಮಾಜವಾದ ನಮ್ಮ ಗುರಿ ಎನ್ನತಕ್ಕ ಸರ್ಕಾರ ಇದುವರೆಗೂ ಏನು ಮಾಡಿದೆ ಎಂಬುದನ್ನು ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಮಾತನಾಡುತ್ತಾ ಕೆಲವು ಅಂಶಗಳನ್ನು ಹೇಳುತ್ತೇನೆ.

ಮೊದಲನೆಯದಾಗಿ ವೇತನ ಆಯೋಗ ಶಿಫಾರಸು ಮೇಲೆ 10 ಕೋಟಿ ರೂಪಾಯಿ ಭಾರ ಹೊತ್ತಾದರೂ ಸರ್ಕಾರದವರು, ಈ ಸರ್ಕಾರೀ ನೌಕರರಿಗೆ ಅದನ್ನು ಕೊಡುತ್ತೇವೆಂದು ತೀರ್ಮಾನ ಕೈಕೊಂಡದ್ದಕ್ಕಾಗಿ ಸರ್ಕಾರವನ್ನು ವಂದಿಸುತ್ತೇನೆ. ಸರ್ಕಾರೀ ನೌಕರರು ಪ್ರಜಾಸಂಖ್ಯೆಯಲ್ಲಿ ಶೇಕಡಾ 2ರಷ್ಟು ಮಾತ್ರ ಇದ್ದಾರೆ. ಇಷ್ಟು ಅಲ್ಪಸಂಖ್ಯಾತರಿದ್ದರೂ ಕೂಡ ಇವರ ವಿಚಾರದಲ್ಲಿ ಸರ್ಕಾರ ದಯೆ ತೋರಿಸಿದುದು ಒಳ್ಳೆಯದೆ. ಆದರೆ ದೇಶದಲ್ಲಿ ಶೇಕಡಾ 25 ಭಾಗ ಕಷ್ಟಪಡತಕ್ಕ ಜನರೂ ಸರ್ಕಾರ ದಯೆ ಇದ್ದಾರೆ. ಅವರ ವಿಚಾರದಲ್ಲಿ ಸರ್ಕಾರದವರು ಏನೂ ಒಂದು ಅವಶ್ಯವಾದ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲ. ಹಿಂದೆ ವೇತನ ಅಯೋಗದ ವರದಿ ಮೇಲೆ ಮಾತನಾಡುತ್ತಿದ್ದಾಗ ಮಾನ್ಯ ಅರ್ಥಿಕ ಸಚಿವರು, ಕೇವಲ ಸರ್ಕಾರಿ ನೌಕರರು ಮಾತ್ರವಲ್ಲ, ಇನ್ನೂ ಬೇರೆ ವರ್ಗದ ಜನರೂ ಇದ್ದಾರೆ, ಅವರ ಕಡೆಗೂ ನೋಡಬೇಕಾಗುತ್ತದೆಂದು ಹೇಳಿದ್ದರು. ಅವರು ಸ್ಥಿತಿಗತಿಗಳನ್ನು ಉತ್ತಮಪಡಿಸುತ್ತಾರೆ, ಅವರ ಜೀವನ ಮಟ್ಟ ಸುಧಾರಿಸುತ್ತಾರೆ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಅದು ನಿರಾಶೆಯಾಗಿದೆ. ಈಗ ಕೂಲಿಗಾರರು, ಅದರಲ್ಲೂ ವ್ಯವಸಾಯ ಕೂಲಿಗಾರರು ಪಡುವ ಕಷ್ಟ ನೋಡುವುದಕ್ಕಾಗುವುದಿಲ್ಲ. ಅವರನ್ನು ನೋಡಿದರೆ ಅವರು ಮಾನವ ಕುಲಕ್ಕೆ ಸೇರಿದವರೇ ಎಂದು ಹೇಳುವುದಕ್ಕೆ ನಾಚಿಕೆಯಾಗುತ್ತದೆ. ಮೊನ್ನೆ ಒಂದು ದಿವಸ ಮಾನ್ಯ ಮಂತ್ರಿಯವರನ್ನು ನಾನು ಕೇಳಿದೆ. ''ತಾವು ಉದಾರಿಗಳು, ಅಧಿಕಾರದಲ್ಲಿದ್ದವರು, ಬಡ ಜನರಿಗೇನಾದರೂ ಮಾಡಬಾರದೇ ?'' ಎಂದು. ''ನಾವು ಮಿನಿಮಂ ವೇಜಸ್ ಆಕ್ಟ್ ಜಾರಿಗೆ ತರುತ್ತೇವಲ್ಲ.'' ಎಂದು ಹೇಳಿದರು. ಆ ಆಕ್ಟ್‌ನಲ್ಲಿ ಏನಿದೆ ? ಒಬೀರಾಯನ ಕಾಲದ ಕನಿಷ್ಠ ದರ್ಜೆಯ ಜೀವನ ಮಟ್ಟ ಏನಿದೆ, ಅದು ಅದರಲ್ಲಿ ಇದೆ. ಇವತ್ತು ಸರ್ಕಾರೀ ನೌಕರನಿಗೆ ಬರತಕ್ಕ ಮಾಸಿಕ ವರಮಾನದ ಕಾಲು ಭಾಗವಾದರೂ ಈ ಕೂಲಿಗಾರನಿಗೆ ಒಂದು ತಿಂಗಳಿಗೆ ಬರುವುದಿಲ್ಲ. ಅಂಥದ್ದರಲ್ಲಿ ಅವರ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಏನು ಮಾಡಿದ್ದಾರೆ, ಅಂದರೆ, ಎರಡು ಲೇಬರ್ ಕಮಿಶನ್‌ರನ್ನು ಜಾಸ್ತಿ ಮಾಡಿದ್ದಾರೆ. ಈ ಕೂಲಿಗಾರರಲ್ಲಿ ಹೆಚ್ಚಾಗಿ ಇರತಕ್ಕವರು ಹರಿಜನರು. ಮೊನ್ನೆ ತಾನೇ ಹರಿಜನರ ಬಗ್ಗೆ ಇಲ್ಲಿ ಬಹಳ ಜನರು ಬಹಳವಾಗಿ ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ಇದಕ್ಕೆಲ್ಲಾ ಸರ್ಕಾರದವರು ಒಂದು ನಾಟಕವನ್ನು ಮಾಡುತ್ತಿದ್ದಾರೆ. ಇವತ್ತು ಅವರಿಗೆ ಎರಡು ಎಕರೆ ಭೂಮಿ ಕೊಟ್ಟರೆ ಬಡವನ ಉದ್ಧಾರವಾಗುತ್ತದೆಯೇ ? ಎರಡು ಎಕರೆ ಭೂಮಿಯನ್ನು ಒಬ್ಬ ಬಡವನಿಗೆ ಕೊಟ್ಟರೆ, ಬಡವನನ್ನು ಮತ್ತಷ್ಟು ಬಡವನನ್ನಾಗಿ ಮಾಡುತ್ತದೆ. ಅವನ ಸ್ಥಿತಿಗತಿಗಳು ಇದರಿಂದ ಉತ್ತಮವಾಗುವುದಿಲ್ಲ. ಅವನು ಅದನ್ನು ಸಾಗುವಳಿ ಮಾಡಬೇಕಾದರೆ ಒಂದು ಜೊತೆ ಎತ್ತು, ಬೀಜ, ಗೊಬ್ಬರ ಮತ್ತು ಹಣದ ಸಹಾಯವೂ ಬೇಕಾಗುತ್ತದೆ. ಎತ್ತುಗಳಿದ್ದರೂ ಅದನ್ನು ಸಾಕಬೇಕಾಗುತ್ತದೆ. ಸಮಾಜವಾದವನ್ನು ಸ್ಥಾಪನೆ ಮಾಡಬೇಕೆಂದಿದ್ದ ಸರ್ಕಾರ ಒಬ್ಬರನ್ನು ಚೆನ್ನಾಗಿ ಕಾಣುವುದು, ಮತ್ತೊಬ್ಬರನ್ನು ಅನಾದರಣೆಯಿಂದ ಕಾಣುವುದು ಸರಿಯಲ್ಲ. ನಿಮ್ಮ ಆಡಳಿತದಲ್ಲಿ ಅದರ ದೃಷ್ಟಿಕೋನ ಬದಲಾವಣೆಯಾಗದಿದ್ದರೆ ಜನಸಾಮಾನ್ಯರಲ್ಲಿ ಹೇಗೆ ಬದಲಾವಣೆಯಾಗುತ್ತದೆ ? ಇದನ್ನು ಏಕೆ ಸರ್ಕಾರದವರು ಪರಿಶೀಲನೆ ಮಾಡಬಾರದು ? ಬಡ ಜನರು ಏಳಿಗೆಯಾಗಬೇಕಾದರೆ ಅದಕ್ಕೆ ಒಂದು ವ್ಯವಸ್ಥಿತವಾದ ಯೋಜನೆಯಾಗಬೇಕು. ಎರಡು ಎಕರೆ ಭೂಮಿ ಕೊಟ್ಟರೆ ಉದ್ಧಾರವಾಗುತ್ತದೆಂಬುದು ಶುದ್ಧ ತಪ್ಪು. ಸರ್ಕಾರದವರು ಈಗ ಬೇರೆ ಬೇರೆ ಕಾರ್ಯಗಳಿಗೆ ಎಷ್ಟೋ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ ಮತ್ತು ಎಷ್ಟೋ ಲಕ್ಷಗಟ್ಟರೆ ಹಣ ಇವತ್ತು ಪೋಲಾಗಿ ಹೋಗುತ್ತಿದೆ. ಅಂಥದರಲ್ಲಿ ಇಂಥ ಬಡ ಜನರ ಏಳಿಗೆಗಾಗಿ ಸ್ವಲ್ಪ ಹಣ ಖರ್ಚು ಮಾಡಿದರೆ ಪರವಾ ಇಲ್ಲ. ಆದ್ದರಿಂದ ಸರ್ಕಾರದವರು ಈ

ದಿಸೆಯಲ್ಲಿ ಒಂದು ತಕ್ಕ ಯೋಜನೆಯನ್ನು ಮಾಡಿ, ಬಡ ಜನರ ಉದ್ಧಾರವಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

6-30 P.M.

ಆದರೆ ಒಂದು ವಿಷಯ. ನಮ್ಮ ದೇಶದಲ್ಲಿ ಯಾವದೊಂದೂ ಸುಧಾರಣೆಯಾಗಬೇಕಾದರೂ ಚಳುವಳಿ ಇಲ್ಲದೆ ಯಾವ ಸುಧಾರಣೆಯೂ ಆಗಿಲ್ಲ. ಬಡಜನರ ಕಷ್ಟ ಇಷ್ಟೊಂದು ಇದ್ದರೂ ಅವರ ತಾಳ್ಮೆಗೂ ಮಿತಿ ಉಂಟು. ಅವರೂ ಕೂಡ ಚಳುವಳಿ ಹೂಡಬೇಕಾಗುತ್ತದೆ. ಇಂತಹ ಒಂದು ಸ್ಥಿತಿಗೆ ಅವರನ್ನು ತಂದಿಟ್ಟಿದ್ದೀರಿ. ನೀವು ನಮ್ಮಲ್ಲಿ ಬಂದೂಕವಿದೆಯೆಂದು ಹೇಳಬಹುದು. ಅದರಿಂದೇನೂ ನಿಮಗೆ ಸಹಾಯವಾಗುವುದಿಲ್ಲ. ಆದ್ದರಿಂದ ಬಡವರ ಉದ್ಧಾರಕ್ಕಾಗಿ ಒಂದು ವ್ಯವಸ್ಥಿತವಾದ ಯೋಜನೆಯನ್ನು ನೀವು ಹಾಕಬೇಕು. ಅದು ಇನ್ನು 10-20 ವರ್ಷಗಳಲ್ಲಿ ಪೂರೈಸಿದರೂ ಏನೂ ಪರವಾ ಇಲ್ಲ. ದಯವಿಟ್ಟು ಈಗಲೇ ಅವರ ಉದ್ಧಾರದ ಬಗ್ಗೆ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಸಾಮಾನ್ಯವಾಗಿ ದೇಶಾದ್ಯಂತ ಬಡವರು ಅಭಾವ ಪರಿಸ್ಥಿತಿಯಲ್ಲಿ ಬಹಳ ಕಷ್ಟಪಡುತ್ತಿದ್ದಾರೆ. ಬಡವರಿಗೆ ಈಗ ಮೈಗೆ ಬಟ್ಟೆ ಇಲ್ಲ, ಹೊಟ್ಟೆಗೆ ಊಟವಿಲ್ಲ, ಅವರನ್ನು ನೋಡಿದರೆ ಅವರು ನಿಜವಾಗಿ ಮಾನವರ ಹಾಗೆ ಕಾಣುತ್ತಾ ಇಲ್ಲ, ಅವರು ಪ್ರಾಣಿಗಳಂತೆ ಇದ್ದಾರೆ. ನಮ್ಮ ಪಕ್ಕದ ಪ್ರಾಂತಗಳಾದ ಆಂಧ್ರ ಪ್ರದೇಶದ ಅಭಾವ ಪ್ರದೇಶಗಳಲ್ಲಿ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿದ್ದಾರೆ. ಕೋಲಾರ ಜಿಲ್ಲೆಯಲ್ಲಿಯೂ ಕೂಡ ಅಂತಹ ಒಂದು ಬೋರ್ಡನ್ನು ಮಾಡಿಕೊಳ್ಳಬೇಕು. ನಮ್ಮ ದೇಶದಲ್ಲಿ ಇಂತಹ ಅಭಾವ ಪ್ರದೇಶಗಳು ಅನೇಕ ಕಡೆಗಳಲ್ಲಿವೆ. ಅವನ್ನು ಉತ್ತಮಪಡಿಸಿ ಎಂದು ಹೇಳಿದ್ದರೂ ಇತ್ತಕಡೆಗೆ ಸರ್ಕಾರ ಕಿವಿ ಕೊಡುತ್ತಾ ಇಲ್ಲ. ಈಗಲೇ ಪರಿಸ್ಥಿತಿ ಹದಗೆಡುವ ಮುನ್ನ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಇಷ್ಟಾದರೂ ನಮಗೆ ಸರಿಯಾದ ನೆರವು ಕೊಟ್ಟಿಲ್ಲ. ಮೈಸೂರು ಮತ್ತು ಬಿದರೆ ಜಿಲ್ಲೆಗಳು ಕೇಂದ್ರ ಸರ್ಕಾರದಿಂದ ಸಹಾಯ ಪಡೆದಿವೆ. ಇದು ಬಹಳ ವಿಚಿತ್ರವಾದ ವಿಚಾರ. ಮೈಸೂರು ಜಿಲ್ಲೆಯಲ್ಲಿ ಅಭಾವವಿದೆಯೆಂದು ಹೇಳಿದರು. ಗುಂಡ್ಲುಪೇಟೆ ಮತ್ತು ಚಾಮರಾಜ ನಗರದಲ್ಲಿ ಒಳ್ಳೆಯ ನದಿಗಳಿವೆ. ಅವರೂ ಅಲ್ಲಿ ಕೇಂದ್ರ ಸರ್ಕಾರದಿಂದ ನೆರವು ಬಂತು ಮಂತ್ರಿ ಮಂಡಲದಲ್ಲಿ ಮೈಸೂರು ಜಿಲ್ಲೆಯ ಮೂರು ಜನ ಮಂತ್ರಿಗಳು ಇದ್ದಾರೆ. ಆದ್ದರಿಂದ ಮೈಸೂರಿಗೆ ಆ ಅನುಕೂಲಗಳನ್ನು ಕೊಟ್ಟಿದ್ದಾರೆ. ಕೋಲಾರದಲ್ಲಿ ಮೊದಲಿನಿಂದಲೂ ಅಭಾವ ಪರಿಸ್ಥಿತಿ ಬಂದಿದೆಯೆಂದು ಹೇಳುತ್ತಿದ್ದೇವೆ. ನಮಗೆ ಗಂಜಿ ಕೊಡಿ, ಕೂಲಿ ಕೊಡಿ ಎಂಬುದಾಗಿ ಹೇಳಿದರೆ ಅದಕ್ಕೆ ಸರ್ಕಾರದವರು ತಯಾರು ಇಲ್ಲ. ಇದು ಸಮಾಜವಾದದ ನೀತಿಯೇ ? ಇದಕ್ಕೆ ನಿಮಗೆ ಜವಾಬು ಕೊಡುವುದಕ್ಕಾಗುವುದಿಲ್ಲ. ಅಭಾವ ಪ್ರದೇಶಗಳಲ್ಲಿ ಹೆಚ್ಚಿಗೆ ಆಹಾರ ಧಾನ್ಯಗಳನ್ನು ಬೆಳೆಸಬೇಕು. ನಮ್ಮಲ್ಲಿ ಹೆಚ್ಚಿಗೆ ನದಿಗಳಿಲ್ಲ, ಕೆರೆಗಳ ನಿರ್ಮಾಣ ಮಾಡಿಕೊಂಡು ನಾವು ಉದ್ಧಾರವಾಗಬೇಕಾಗಿದೆ. ರಾಜ್ಯಪಾಲರ ಭಾಷಣದಲ್ಲಿ ದೊಡ್ಡ ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳ ಪ್ರಸ್ತಾಪವಿದೆ. ಆದರೆ ಸಣ್ಣ ನೀರಾವರಿ ಕಾಮಗಾರಿಗಳ ಪ್ರಸ್ತಾಪವಂತೂ ಇಲ್ಲ. ನನಗೆ ತಿಳಿದಿರುವ ಹಾಗೆ ಮುಂದಿನ ವರ್ಷ ಸಣ್ಣ ನೀರಾವರಿ ಕಾಮಗಾರಿಗಳ ಬಗ್ಗೆ ಸಾಕಷ್ಟು ಹಣವನ್ನು ಒದಗಿಸುವುದಿಲ್ಲವೆಂದು ಕಂಡುಬಂದಿದೆ. ದೊಡ್ಡ ದೊಡ್ಡ ನೀರಾವರಿ ಯೋಜನೆಯ ಕೆಲಸಗಳನ್ನು ಈಗ ತೆಗೆದುಕೊಂಡರೆ ಅವು ಕಾರ್ಯಗತವಾಗಬೇಕಾದರೆ ವರ್ಷಾನುಗಟ್ಟಲೆಯಾಗುತ್ತದೆ. ಸಣ್ಣ ಕೆರೆಗಳ ನಿರ್ಮಾಣಕ್ಕಾಗಿ ಕೇವಲ 20-50 ಸಾವಿರ ರೂಪಾಯಿಗಳು ಮಾತ್ರ ಬೇಕಾಗುತ್ತದೆ. ಅಷ್ಟು ಮೊಬಲಗಿನಲ್ಲಿಯೇ ಸಣ್ಣ ಕೆರೆಗಳು ನಿರ್ಮಾಣವಾಗುತ್ತವೆ. ಮಳೆರಾಯನ ಕರುಣೆ ಬಂದರೆ ಮಾತ್ರ ಬೇಕಾದಷ್ಟು ಆಹಾರವನ್ನು ಬೆಳೆಯಬಹುದು. ಕೋಲಾರದಲ್ಲಿ ಸಣ್ಣ ಕೆರೆಗಳು ಇಲ್ಲ. ಆದರೆ ನಾವು ಚಳುವಳಿ ಮಾಡುವುದಿಲ್ಲ. ನಮ್ಮ ಜಿಲ್ಲೆಯ ಪ್ರಾತಿನಿಧ್ಯ ಇರುವುದು ಮುಕ್ಕಾಲು ಮಂತ್ರಿಗೆ. ಅಂದ ಮೇಲೆ ಮೂರು ಮಂತ್ರಿಗಳ ಪ್ರಾತಿನಿಧ್ಯ ಇರುವ ಮೈಸೂರಿಗಿಂತ ಹೆಚ್ಚಾಗಿ ನಮಗೆ ಕೇಂದ್ರದಿಂದ ಸಹಾಯ ಸಿಗುತ್ತದೆಯೇ ? ಇಂತಹ ಒಂದು ಅನ್ಯಾಯಕ್ಕೆ ಅವಕಾಶ ಕೊಡದೆ, ನಮ್ಮ ಜಿಲ್ಲೆಯ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು. ಈಗ ಇರತಕ್ಕ ಅಭಾವವನ್ನು ಅಲ್ಲಿ ಹೋಗಲಾಡಿಸಬೇಕು.

ಇನ್ನು ವಾಟರ್ ರೇಟ್ ಸಂಬಂಧವಾಗಿ ಅನೇಕ ತಜ್ಞರು ನನಗೆ ಕಾಗದ ಬರೆಯುತ್ತಿದ್ದಾರೆ. ಇದು ಸರ್ಕಾರದ ಅಕ್ರಮದ ಔನ್ನತ್ಯ ಎಂದು ನಾನು ಹೇಳಬೇಕಾಗಿದೆ. ಯಾವ್ಯಾವ ರೈತ ಎಷ್ಟೆಷ್ಟು ವಿಸ್ತೀರ್ಣ ಪ್ರದೇಶದಲ್ಲಿ ಯಾವ್ಯಾವ ಬೆಳೆಯನ್ನು ಬೆಳೆಯುತ್ತಾನೆ ಎಂದು ತಿಳಿದುಕೊಂಡು ನೋಟೀಸ್ ಕೊಡಬೇಕು. ಅವರಿಗೆ ಅನ್ಯಾಯವಾಗಿದ್ದರೆ ಅವರು ಅಪೀಲು ಹೋಗಬಹುದೆಂದು

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಹೇಳಿದ್ದಾರೆ. 1965ನೇ ಇಸವಿಯಿಂದಲೂ ಯಾವ ರೈತನಿಗೂ ಯಾವ ನೋಟೀಸನ್ನು ಕೊಡದೆ ಏಕದಂ ಇವತ್ತು 1965ನೇ ಇಸವಿಯಿಂದ ರೈತರು ವಾಟರ್ ರೇಟ್ ಕೊಡಬೇಕೆಂದು ಅವರನ್ನು ಸರ್ಕಾರ ಕೇಳುವುದು ನ್ಯಾಯವೇ, ಧರ್ಮವೆ? ಆ ರೀತಿಯಾಗಿ ವಸೂಲುಮಾಡಿ ಎಂದು ರೆವಿನ್ಯೂ ಅಧಿಕಾರಿಗಳಿಗೆ ಅಜ್ಞೆ ಕೊಟ್ಟಿದ್ದಾರೆ. ರೈತರಿಗೆ ಇತ್ತೀಚೆಗೆ ಅನೇಕ ವಿಷಯಗಳು ಚೆನ್ನಾಗಿ ಗೊತ್ತಾಗುತ್ತಿವೆ. ಯಾರೂ ಆ ರೀತಿ ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಕಾಗದಗಳನ್ನು ಬರೆಯುತ್ತಾರೆ. ವಸೂಲಿಗೆ ಹೋದಾಗ ರೈತರಿಗೆ ವಿಪರೀತ ದಿಗಿಲು, ಭಯ ಪಡಿಸುತ್ತಾರೆ. ಇಂತಹ ಕ್ರಮಗಳನ್ನು ಮಾಡಬಾರದು. ಇದನ್ನು ಕೂಡಲೇ ಮನ್ನಾ ಮಾಡಿ ನೀವು ಕಾನೂನನ್ನು ಅನುಸರಿಸಿ ನೋಟೀಸು ಕೊಟ್ಟು ವಸೂಲುಮಾಡಿ. ಸಂತೋಷ. ಇದನ್ನು ಸರ್ಕಾರ ದವರು ಶೀಘ್ರವಾಗಿ ಗಮನಿಸಬೇಕು. ಇಲ್ಲದೇ ಹೋದರೆ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಅನಾ ಹುತವಾಗುತ್ತದೆ. ಅದಕ್ಕಾಗಿ ಸರ್ಕಾರದವರು ಸೂಕ್ತ ವ್ಯವಸ್ಥೆ ಮಾಡಬೇಕೆಂದು ನಾನು ಪ್ರತಿಭಟನೆ ಸೂಚಿಸುತ್ತೇನೆ. ಇನ್ನು ಬೆಂಗಳೂರಿಗೆ ಪಕ್ಕದಲ್ಲಿರುವ ಆಡಗೋಡಿ ಸಹಕಾರ ಸಂಘದ ವಿಚಾರದಲ್ಲಿ ನಡೆಯುತಕ್ಕ ಅಕ್ರಮಗಳ ಬಗ್ಗೆ ಅಚ್ಚುಹಾಕಿಸಿ ಎಲ್ಲರಿಗೂ ಹಂಚಿದ್ದಾರೆ. ಅಲ್ಲಿ ಹಣ ದುರುಪಯೋಗ ವಾಗಿದೆ. ಅಲ್ಲಿನ ಲೆಕ್ಕಗಳನ್ನು ಆಡಿಟ್ ಮಾಡಿಸಿ ಎಂಬುದಾಗಿ ಕೇಳಿಕೊಂಡರೂ ರಿಜಿಸ್ಟ್ರಾರ್ ಅವರ ಕಡೆಗೆ ಹೋದರೂ ಅದರ ಕಡೆಗೆ ಯಾರೂ ಗಮನ ಕೊಡುತ್ತಾ ಇಲ್ಲ. ಅಂಥಾದ್ದನ್ನು ಸರ್ಕಾರ ದವರು ಗಮನಿಸಬೇಕು.

ಇನ್ನು ಅನುವಂಶಿಕ ಹುದ್ದೆಗಳನ್ನು ರದ್ದು ಮಾಡಿದ್ದು ಬಹಳ ಸಂತೋಷ. ಅವರಿಗೆ ಕೊಡ ತಕ್ಕ ಪರಿಹಾರದ ಬಗ್ಗೆ ಹೇಳುವುದಾದರೆ ಕೆಲವು ಗ್ರಾಮ ನೌಕರರುಗಳಿಗೆ 1963ನೇ ಇಸವಿಯಿಂದಲೂ ಮತ್ತು ಅದಕ್ಕಿಂತ ಮೊದಲೂ ಕೊಡಬೇಕಾದ ಪರಿಹಾರವನ್ನು ಕೊಟ್ಟಿಲ್ಲ. ಈಗ ಅನುವಂಶಿಕ ಹುದ್ದೆಗಳು ರದ್ದಾಗಿರುವುದರಿಂದ ಆ ಕಾಲದಿಂದಲೂ ಇರತಕ್ಕವರಿಗೆ ಭೂಮಿ ಕೊಡಬೇಕು. ಅದನ್ನು ಏತಕ್ಕೆ ಅವರಿಗೂ ಕೊಡಬಾರದು? ಇವೆಲ್ಲವನ್ನೂ ಸರ್ಕಾರದವರು ಗಮನಿಸಿ ನಿರ್ದಿಷ್ಟ ವಾದ ಆಜ್ಞೆಯನ್ನು ಹೊರಡಿಸಲಿಲ್ಲ. ರೆವಿನ್ಯೂ ಮಂತ್ರಿಗಳು ಇದನ್ನು ಗಮನಿಸಬೇಕೆಂದು ಮಾನ್ಯ ಶ್ರೀ ಕೌಜಲಗಿಯವರಲ್ಲಿ ನಾನು ಪ್ರಾರ್ಥಿಸುತ್ತೇನೆ. ಗ್ರಾಮನೌಕರರಿಗೆ ಕೊಡಬೇಕಾದಂಥ ಹಣವನ್ನು ದಯವಿಟ್ಟು ಬೇಗನೆ ಪಾವತಿ ಮಾಡುವುದಕ್ಕೆ ಕೂಡಲೇ ಅಪ್ಪಣೆ ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಲಾ ಅಂಡ್ ಆರ್ಡರ್ ವಿಷಯ. ಕೋಲಾರದಲ್ಲಿ ಒಂದು ಸಣ್ಣ ಕೊಲೆಯ ವಿಷಯ ಬಹಳ ದೊಡ್ಡದಾಗಿ ಪರಿಣಮಿಸಿದೆ. ನಿರಪರಾಧಿಯಾದಂಥವರಿಗೆ ತೊಂದರೆಯಾಯಿತು. ಅದಕ್ಕೆ ಯಾರು ಕಾರಣರು ಎಂಬುದನ್ನು ವಿಚಾರಮಾಡಿ ಮುಂದೆ ಆ ರೀತಿಯಾಗದಂತೆ ಸರ್ಕಾರದವರು ಮಾಡ ಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಇನ್ನು ಗುಂಡಿನ ಬಾಯಿಗೆ ತುತ್ತಾಗುತ್ತಿರುವ ನಿರಪ ರಾಧಿಗಳಿಗೆ ಸೂಕ್ತ ಪರಿಹಾರ ಕೊಡಬೇಕು. ಡೆಪ್ಯುಟಿ ಕಮಿಷನರ ವರದಿ ನೋಡಿ ಅವರಿಗೆ ಪರಿಹಾರ ಕೊಡುತ್ತೇವೆ ಎಂಬುದಾಗಿ ಹೇಳಿದರು. ಅವರು ವರದಿ ಮಾಡಿದರೆ ಅದನ್ನು ನೋಡಿ ಕೊಡುತ್ತೇವೆ ನ್ನುವುದು ಸರಿಯಲ್ಲ. ಸರ್ಕಾರ ಇದರ ಕಡೆಗೆ ಮನಸ್ಸಿಟ್ಟು ವರದಿಯನ್ನು ತರಿಸಿಕೊಂಡು ಅವರಿಗೆ ಸೂಕ್ತ ಪರಿಹಾರವನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿ ನನಗೆ ಇಷ್ಟು ಹೊತ್ತು ಮಾತ ನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಚಂಪಾಬಾಯಿ ಭೋಗಳೆ (ಕಾಗವಾಡ ಎಸ್. ಸಿ.).—ಮಾನ್ಯ ಅಧ್ಯಕ್ಷರೇ, ರಾಜ್ಯ ಪಾಲರ ಭಾಷಣವನ್ನು ನಾನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಈ ಸಭೆಯಲ್ಲಿ ಸೂಚನೆ ಮಾಡಲು ಇಚ್ಛಿಸುತ್ತೇನೆ. ರಾಜ್ಯಪಾಲರು ಸಾಕಷ್ಟು ಯೋಜನೆಗಳನ್ನು ಸರ್ಕಾರದವರು ಈ ವರ್ಷದಲ್ಲಿ ಮಾಡುತ್ತಾರೆಂಬುದನ್ನು ಅವರ ಭಾಷಣದಲ್ಲಿ ನಮೂದುಮಾಡಿ ಬಹಳ ಹೊತ್ತು ಭಾಷಣ ಮಾಡಿ ದ್ದಾರೆ. ಅದಕ್ಕೆ ನಾನು ಬಹಳ ಸಂತೋಷಪಡಬೇಕಾಗಿದೆ. ಅದರ ಬಗ್ಗೆ ಕೆಲವು ಸೂಚನೆಗಳನ್ನು ಮಾಡುತ್ತೇನೆ. ಮಧ್ಯಮ ವರ್ಗದ ಇರಿಗೇಷನ್ ಸಲುವಾಗಿ ಸಾಕಷ್ಟು ಯೋಜನಾ ಕಾರ್ಯಗಳನ್ನು ಕಾರ್ಯಗತ ಮಾಡಿದ್ದಾರೆಯೇ ಎಂದು ನೋಡಿದರೆ, ಅಷ್ಟಾಗಿ ಗಮನ ಕೊಡುತ್ತಾ ಇಲ್ಲ. ಸರ್ಕಾರ ದವರು ಆ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ನಮ್ಮ ಕಡೆ ರೈತರು ಇರ್ರಿಗೇಷನ್ ಬಗ್ಗೆ ಬಹಳ ಹಿಂದೆ ಹೋಗಿದ್ದಾರೆ. ಅವು ಇದುವರೆಗೂ ಸಾಕಷ್ಟು ಕಾರ್ಯಗತವಾಗದೆ ಅಡ್ಮಿನಿಸ್ಟ್ರೇಷನ್ ಬಹಳ ಲೂಜ್ ಆಗಿ ಹೋಗಿರುವುದರಿಂದ ಸರ್ಕಾರದ ಆಡಳಿತ ಬಹಳ ಅಧೋಗತಿಗೆ ಹೋಗಿದೆ. ಆದರೆ ಇಲ್ಲಿ ಭಾಷಣ ಮಾಡುವುದು ಒಂದು ಶೈಲಿ ಎಂದು ಯಾರೂ ಭಾಷಣ ಮಾಡಬಾರದು. ಕೆಲಸಕಾರ್ಯಗಳನ್ನು ಕಾರ್ಯಗತ ಮಾಡುವುದಕ್ಕೆ ಮೊದಲು

ಪ್ರೋಗ್ರಾಮ್ ಹಾಕಿಕೊಳ್ಳಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಹಳ್ಳಿಘಟಕಗಳಲ್ಲಿ ಕೆಲಸ ಕಾರ್ಯಗಳನ್ನು ಮಾಡತಕ್ಕ ಆಡಳಿತ ವರ್ಗ ಬಹಳ ಲೂಜ್ ಆಗಿದೆ. ಇರಿಗೇಷನ್ ಕೆಲಸಗಳನ್ನು ಮಾಡಬೇಕಾದರೆ ಬಹಳ ಕಷ್ಟವಾಗಿದೆ. ಈ ವರ್ಷ ಸಣ್ಣ ಸಣ್ಣ ಟ್ಯಾಂಕುಗಳನ್ನು ಕಟ್ಟುವುದು ಬಹಳ ಅಧೋಗತಿಗೆ ಬಂದಿದೆ. ಈ ಬಗ್ಗೆ ಸರ್ಕಾರ ಸಾಕಷ್ಟು ಯೋಚನೆ ಮಾಡಬೇಕಾಗಿತ್ತು. ಇರಿಗೇಷನ್ನಿಗೆ ಸಂಬಂಧಪಟ್ಟ ಎಷ್ಟೋ ಕೆಲಸಕಾರ್ಯಗಳು ಈಗ ಸುಮಾರು 20 ವರ್ಷಗಳಿಂದ ಕಾರ್ಯಗತ ವಾಗದೆ ಹಾಗೆಯೇ ಹಿಂದೆ ಬೀಳುತ್ತಿವೆ. ನಾನು ಪ್ರತಿ ವರ್ಷ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಆ ಕೆಲಸಗಳು ಕಾರ್ಯಗತವಾಗದೇ ಇದೆ ಎಂದು ಹೇಳಬೇಕಾಗಿದೆ. ಬಾರ್ಡರ್ ಏರಿಯಾದ ಪರಿಸ್ಥಿತಿಯನ್ನು ನೋಡಿದರೆ ಬಹಳ ನಾಚಿಕೆಯಾಗುತ್ತದೆ. ಪ್ರತಿಯೊಂದು ಕೆಲಸಗಳ ಪ್ಲಾನು ಮತ್ತು ಎಸ್ಟಿಮೇಟನ್ನು ಮಾಡುತ್ತಾರೆ. ಆದರೆ ಅವುಗಳನ್ನು ಕಾರ್ಯಗತ ಮಾಡುವುದಿಲ್ಲ. ಹೀಗೆ ಮಾಡಿವರೆ ಸರ್ಕಾರಕ್ಕೆ ಕೆಟ್ಟಹೆಸರು ಬರುತ್ತದೆ. ಅದನ್ನು ಕಾರ್ಯಗತ ಮಾಡುವ ಅಡ್ಮಿನಿಸ್ಟ್ರೇಷನ್ ಏನಿದೆ ಅದು ಆ ಯೋಜನೆಗಳನ್ನು ಕಾರ್ಯಗತ ಮಾಡುವಂತೆ ನೋಡಿಕೊಳ್ಳಬೇಕು ; ಎಂದು ನಾನು ಹೇಳುತ್ತೇನೆ.

ಹರಿಜನರು ಮತ್ತು ಗಿರಿಜನರಿಗೆ ವಿಧಾನಮಂಡಲಗಳಲ್ಲಿ ಮೀಸಲು ಸ್ಥಾನವನ್ನು ಮತ್ತೆ 10 ವರ್ಷಗಳು ಮುಂದುವರಿಸಿಕೊಂಡು ಹೋಗಬೇಕೆಂದು ರಾಜ್ಯಾಂಗವನ್ನು ತಿದ್ದುಪಡಿಮಾಡಿ ಅದರಲ್ಲಿ ಒಂದು ರಕ್ಷಣೆಯನ್ನು ಸರ್ಕಾರದವರು ಒದಗಿಸಿಕೊಟ್ಟಿದ್ದಾರೆ. ಬೇರೆ ರಾಜ್ಯಗಳಿಗಿಂತ ಮೈಸೂರು ರಾಜ್ಯದಲ್ಲಿ ಹರಿಜನ ಗಿರಿಜನರ ಸ್ಥಿತಿ ಸ್ವಲ್ಪ ಚನ್ನೋ ಇದೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ಮಾಡುವ ಕೆಲಸಗಳು ಯಶಸ್ವಿಯಾಗದೆ ಹರಿಜನರ ಅಭಿವೃದ್ಧಿಗಾಗಿ ಕೊಟ್ಟಂಥಹ ಹಣ ಲ್ಯಾಪ್ಸ್ ಆಗಿದೆ ಯಾವ ಕೆಲಸಕ್ಕೋಸ್ಕರ ಹಣವನ್ನು ಕೊಡುತ್ತಾರೆಯೋ ಆ ಕೆಲಸಗಳು ಕಾರ್ಯಗತವಾಗದೇ ರೊಕ್ಕ ಲ್ಯಾಪ್ಸ್ ಆಗುವಂತಹ ಪರಿಸ್ಥಿತಿ ಬಂದಿದೆ. ಪ್ರತಿಯೊಂದು ಏರಿಯಾದಲ್ಲಿಯೂ ಇದೇ ರೀತಿಯಾಗಿದೆ. ಪ್ರಧಾನ ಮಂತ್ರಿಯವರಾದ ಶ್ರೀಮತಿ ಇಂದಿರಾ ಗಾಂಧಿಯವರು ಹರಿಜನೋದ್ಧಾರವನ್ನು ಮಾಡುತ್ತೇನೆಂದು ಹೇಳಿ ಗಾಂಧಿ ಶತಾಬ್ದಿ ವರ್ಷದಲ್ಲಿ ಇವರಿಗೆ ವಿಧಾನ ಮಂಡಲಗಳಲ್ಲಿ ಮೀಸಲು ಸ್ಥಾನವನ್ನು ಮುಂದುವರಿಸಬೇಕೆಂದು ಮತ್ತೆ 10 ವರ್ಷಗಳ ಜೀವದಾನ ನೀಡಿದ್ದಾರೆ. ಈ ಗಾಂಧಿ ಶತಾಬ್ದಿಯ ವರ್ಷದಲ್ಲಿ ಹರಿಜನರ ಉದ್ಧಾರ ಎಷ್ಟರಮಟ್ಟಿಗೆ ಆಗಬೇಕಾಗಿತ್ತೋ ಅಷ್ಟರಮಟ್ಟಿಗೆ ಆಗಿಲ್ಲ. ಆದ್ದರಿಂದ ಹರಿಜನರ ಉದ್ಧಾರ ಯಾವರೀತಿ ಆಗಬೇಕೆಂಬ ಬಗ್ಗೆ ಒಂದು ಯೋಜನೆಯನ್ನು ಹಾಕಿಕೊಂಡು ಅದರ ರೂಪ ರೇಷೆಗಳನ್ನು ಆಕರಣೆ ಮಾಡಿಕೊಂಡು ಹರಿಜನರ ಉದ್ಧಾರವನ್ನು ಮಾಡಬೇಕು ಗಾಂಧಿತತ್ವವನ್ನು ಆಚರಣೆಯಲ್ಲಿ ತರಬೇಕೆಂದು ನಾನು ಸರ್ಕಾರದವರಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಹರಿಜನರಿಗೆ 10 ವರ್ಷಗಳ ಕಾಲ ವಿಧಾನಮಂಡಲಗಳಲ್ಲಿ ಸ್ಥಾನವನ್ನು ಮೀಸಲಿಡುವ ಸೌಲಭ್ಯವನ್ನು ನೀಡಿದರೆ ಏನೂ ಪ್ರಯೋಜನವಿಲ್ಲ. 20 ವರ್ಷಗಳಿಂದ ಆಗದೆ ಇದ್ದದ್ದು ಇನ್ನು 10 ವರ್ಷಗಳಲ್ಲಿ ಹರಿಜನೋದ್ಧಾರ ಆಗುತ್ತದೆಯೇ ? ಇದುವರೆಗೂ ಹರಿಜನ ಉದ್ಧಾರದ ಬಗ್ಗೆ ಹಾಕಿಕೊಂಡ ಯೋಜನೆಗಳು ಯಾವುವೂ ಕಾರ್ಯಗತವಾಗಿಲ್ಲ. ಜನತೆಗೆ ಅವು ಮುಟ್ಟಿಲ್ಲ. ಆದ್ದರಿಂದ ಅವರು ಯಾವ ಮಟ್ಟದಲ್ಲಿದ್ದರೋ ಇನ್ನೂ ಅದೇ ಮಟ್ಟದಲ್ಲಿದ್ದಾರೆ. ಸರ್ಕಾರದವರು ನಮಗೆ ಅನ್ಯಾಯ ಮಾಡಿದ್ದಾರೆ ಎಂದು ನನ್ನ ಮನಸ್ಸಿಗೆ ನೋವಾಗುತ್ತದೆ. ಇಂದಿರಾ ಗಾಂಧಿಯವರು ಕೆಲವರನ್ನು ತೃಪ್ತಿಪಡಿಸಲು ಇದನ್ನು ಮಾಡಿರಬೇಕು. ಇಡೀ ಇಂಡಿಯಾದೇಶವಲ್ಲಿ ಹರಿಜನೋದ್ಧಾರದ ಬಗ್ಗೆ ಒಂದು ನಯಾಪೈಸಾ ಕೆಲಸ ಆಗಿಲ. ವಿಧಾನ ಮಂಡಲಗಳಲ್ಲಿ ಹರಿಜನ ಎಂ. ಎಲ್. ಎ. ಗಳಿಗೆ ಸೀಟುಗಳನ್ನು ರಿಜರ್ವ್ ಆಗಿ ಇಟ್ಟರೆ ಅದರಿಂದ ನನಗೆ ಸಂತೋಷವೇನೂ ಇಲ್ಲ. ನನಗೆ ಇದು ತುಂಬಾ ಅಸಂತೋಷವಾಗಿದೆ. ನಮ್ಮ ಮೈಸೂರು ಸರ್ಕಾರದವರೂ ಇದನ್ನು ಪಾಸು ಮಾಡಿದ್ದಾರೆ. ನಮ್ಮ ಸರ್ಕಾರದವರು ಹರಿಜನೋದ್ಧಾರದ ಬಗ್ಗೆ ಹೆಚ್ಚು ನಿಗಾ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಹರಿಜನ ಗಿರಿಜನರಿಗೆ ವಿದ್ಯಾಭ್ಯಾಸದ ಬಗ್ಗೆ ಸಾಕಷ್ಟು ಸವಲತ್ತನ್ನು ಕೊಟ್ಟಿದ್ದಾರೆ. ಆದರೆ ಅವರಿಗೆ ಬೇಕಾದ ಪುಸ್ತಕಗಳು ಸಿಕ್ಕುವುದಿಲ್ಲ. ಅವರಿಗೆ ಹಾಕಿಕೊಳ್ಳುವುದಕ್ಕೆ ಬಟ್ಟೆ ಸರಿಯಾಗಿ ಸಿಕ್ಕುವುದಿಲ್ಲ. ಶಾಲಾ ಮತ್ತು ಕಾಲೇಜುಗಳಲ್ಲಿ ಸಾಕಷ್ಟು ಸೀಟು ಕೊಡುವುದಿಲ್ಲ. ಹರಿಜನರಿಗೆ ಎಷ್ಟು ಪರ್ಸೆಂಟ್ ಸೀಟುಗಳನ್ನು ಕೊಡಬೇಕೆಂದು ಕಾನೂನು ಇದೆಯೋ ಆ ಪ್ರಕಾರ ಕೊಟ್ಟಿಲ್ಲ. ನಿಜವಾಗಿಯೂ ಇದನ್ನು ನೋಡಿದರೆ ನನಗೆ ವಿಷಾದವಾಗುತ್ತದೆ. ನೀವು ಕಾಂಗ್ರೆಸ ನವರು ಏನು ಕೆಲಸ ಮಾಡಿದ್ದೀರಿ ಎಂದು ನಮ್ಮನ್ನು ಜನತೆ ಕೇಳುತ್ತಾರೆ. ಜನತೆಯ ಕೆಲಸವನ್ನು ನಾವು ಸರಿಯಾಗಿ ಮಾಡದೇ ಹೋದರೆ ಜನತೆ ನಮ್ಮನ್ನು ದೂಷಿಸುತ್ತದೆ. ಆ ದೃಷ್ಟಿಯನ್ನು ಇಟ್ಟುಕೊಂಡು ನಾವು ಇಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. 10 ವರ್ಷಗಳ ಕಾಲ ಹರಿಜನರಿಗೆ ವಿಧಾನಮಂಡಲಗಳಲ್ಲಿ ಮೀಸಲು ಸ್ಥಾನವನ್ನು ಮುಂದುವರಿಸುವುದನ್ನು ಏತಕ್ಕೆ ಮಾಡಿದರೋ

(ಶ್ರೀಮತಿ ಚಂಪಾಬಾಯಿ ಭೋಗಳೆ)

ಎಂದು ನನಗನ್ನಿಸುತ್ತದೆ. ಮುಂದೆ ನಾನೂ ಸಹ ಇಲ್ಲಿಗೆ ಬರುತ್ತೇನೋ ಇಲ್ಲವೋ ಗೊತ್ತಿಲ್ಲ. ಗಾಂಧಿ ಶತಾಬ್ಧಿ ವರ್ಷದಲ್ಲಿ ಹರಿಜನರಿಗೆ ಎಷ್ಟು ಭೂಮಿಯನ್ನು ಕೊಟ್ಟಿದ್ದೀರಿ, ವಿದ್ಯಾಭ್ಯಾಸ ಮತ್ತು ನೌಕರಿಯಲ್ಲಿ 100ಕ್ಕೆ 18ರಷ್ಟು ಯಾರಿಗೆ ಯಾವಾಗ ಕೊಟ್ಟಿದ್ದೀರಿ? ಈ ರೀತಿ ಯಿಂದ ಹರಿಜನೋದ್ಧಾರ ಕೆಲಸಗಳನ್ನು ಮಾಡಿದರೆ ಹರಿಜನೋದ್ಧಾರ ಆಗುವುದಿಲ್ಲ. ಅದ್ದರಿಂದ ಸರ್ಕಾರದವರು ಹರಿಜನೋದ್ಧಾರಕ್ಕೆ ಸಂಬಂಧಪಟ್ಟ ಕೆಲಸಗಳನ್ನು ಸ್ವಲ್ಪಮಟ್ಟಿಗೆ ಹೆಚ್ಚಿನ ನಿಗಾ ಕೊಟ್ಟು ಮಾಡಬೇಕೆಂದು ನಾನು ಹೇಳುತ್ತೇನೆ.

ವ್ಯವಸಾಯದ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಈ ಇಲಾಖೆಯಲ್ಲಿ ಎಷ್ಟೋ ಮಂದಿ ನೌಕರರನ್ನು ಕಡಿಮೆ ಮಾಡಿದ್ದಾರೆ. ಅಲ್ಲಿ 3–4 ವರ್ಷಗಳಿಂದ ಕೆಲಸಮಾಡು ತ್ತಿದ್ದವರನ್ನು ತೆಗೆದುಹಾಕಿ ಅವರನ್ನು ಕಡಿಮೆ ಮಾಡುತ್ತಿದ್ದಾರೆ. ಈಗಾಗಲೇ ಅವರಿಗೆ ಏಜ್ ಬಾರ್ ಆಗುತ್ತಿದೆ. ಮದುವೆ ಮಾಡಿಕೊಂಡಿದ್ದಾರೆ. ಅಂಥವರನ್ನು ಕೆಲಸದಿಂದ ತೆಗೆದರೆ ಅವರಿಗೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಇದನ್ನು ಸ್ವಲ್ಪ ನೋಡಿಕೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಗ್ರಿಕಲ್‌ಚರಲ್ ಇಲಾಖೆಯೊಂದೇ ಅಲ್ಲಾ, ವಿದ್ಯಾ ಭ್ಯಾಸ ಇಲಾಖೆ, ಪಬ್ಲಿಕ್‌ವರ್ಕ್ಸ್ ಇಲಾಖೆ ಮುಂತಾದ ಇಲಾಖೆಗಳಲ್ಲಿ ಇದೇ ರೀತಿ ಸಾವಿರಾರು ಜನ 3–4 ವರ್ಷ ಸರ್ವೀಸ್ ಆಗಿರುವ ನೌಕರರನ್ನು ಕೆಲಸದಿಂದ ತೆಗೆದುಹಾಕುತ್ತಿದ್ದಾರೆ. ಇದ ರಿಂದ ಅವರಿಗೆ ತುಂಬಾ ತೊಂದರೆಯಾಗುತ್ತದೆ. ಇವರಿಗೆ ಅನುಕೂಲವಾಗುವ ರೀತಿಯಲ್ಲಿ ಸರ ಕಾರದವರು ಯೋಚನೆ ಮಾಡಬೇಕು. ಇವರಿಗೆ ಅನೇಕ ಜನಗಳಿಗೆ ಮದುವೆಯಾಗಿ ಮಕ್ಕಳಾಗಿವೆ, ಏಜ್ ಬಾರ್ ಆಗಿದೆ. ಇಂಥಾ ಸನ್ನಿವೇಶದಲ್ಲಿ ಇವರನ್ನು ಕೆಲಸದಿಂದ ತೆಗೆದರೆ ಅವರು ಯಾವರೀತಿ ಜೀವನ ಮಾಡಬೇಕು ಎಂಬುದನ್ನು ಸರ್ಕಾರದವರು ಯೋಚನೆ ಮಾಡಿ ಇದನ್ನು ಸುಧಾರಣೆ ಮಾಡ ಬೇಕು. ಪ್ರತಿಯೊಂದು ಇಲಾಖೆಯಲ್ಲಿಯೂ ಇದೇರೀತಿಯಲ್ಲಿ ನಡೆಯುತ್ತಿದೆ ಎಂದು ನಾನು ಕೇಳಿ ದ್ದೇನೆ. ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಈಗಾಗಲೇ 3–4 ವರ್ಷ ಗಳಿಂದ ಕೆಲಸಮಾಡುತ್ತಿರುವ ನೌಕರರನ್ನು ಕೆಲಸದಿಂದ ತೆಗೆಯದೆ ಅವರನ್ನು ಅದೇ ಹುದ್ದೆಯಲ್ಲಿ ಖಾಯಂ ಮಾಡಿ ಅವರ ಸರ್ವೀಸನ್ನು ಮುಂದುವರಿಸಬೇಕು ಎಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಕೆಲಸವನ್ನು ಕೊಡುವುದರಲ್ಲಿ ಒಂದು ಕೆಲಸ ನಡೆದಿದೆ. ಅದು ಏನೆಂದರೆ ಯಾರು ರೊಕ್ಕ ಕೊಡುತ್ತಾರೆಯೋ ಅಂಥವರಿಗೆ ನಂಬರ್ ಹಾಕಿ ಕೆಲಸಕ್ಕೆ ಸೆಲೆಕ್ಟ್ ಮಾಡುತ್ತಾರೆ. ದುಡ್ಡು ಕೊಡದೇ ಇದ್ದವರಿಗೆ ನಂಬರು ಬರುವುದಿಲ್ಲ. ಅವರು ಕೆಲಸಕ್ಕೆ ಸೆಲೆಕ್ಟ್ ಆಗುವುದಿಲ್ಲ. ಇಂಥಾ ಅನ್ಯಾಯ ಆಗುವುದನ್ನು ತಪ್ಪಿಸಿ ಆ ಕೆಲಸ ಸರಿಯಾಗಿ ನಡೆಯುವಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಸರ್ಕಾರದವರು ಮುಂದಿನ ವರ್ಷ ಏನೇನು ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡ ಬೇಕೆಂದು ರಾಜ್ಯಪಾಲರ ಭಾಷಣದಲ್ಲಿ ನಮೂದು ಮಾಡಿದ್ದಾರೆಯೋ ಅವುಗಳಿಗೆ ಹೆಚ್ಚು ಗಮನ ಕೊಟ್ಟು ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರದ ವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಕೆಲಸ ಕಾರ್ಯಗಳನ್ನು ಕಾರ್ಯಗತ ಮಾಡಬೇಕಾದರೆ ಅಡ್ಮಿನಿಸ್ಟ್ರೇಷನ್ನನ್ನು ಸ್ವಲ್ಪ ಬಿಗಿಮಾಡಬೇಕು. ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿವೆಯೋ ಅಥವಾ ಇಲ್ಲವೇ ಎಂಬುದನ್ನು ಸ್ವಲ್ಪ ಗಮನಿಸಿ ಅಡ್ಮಿನಿಸ್ಟ್ರೇಷನ್ ಬಿಗಿ ಮಾಡಿ ರಾಜ್ಯಪಾಲರ ಭಾಷಣ ದಲ್ಲಿ ನಮೂದು ಮಾಡಿರತಕ್ಕ ದೇಶದ ಕೆಲಸಕಾರ್ಯಗಳನ್ನು ಕಾರ್ಯಗತ ಮಾಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆ ಗಳನ್ನು ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಂ. ಜಾಲಿಸಟಗಿ (ಭಟ್ಕಳ್).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ವಂದನಾರ್ಪಣ ನಿರ್ಣಯದ ಮೇಲೆ ಕೆಲವು ಉಪ ಸೂಚನೆಗಳನ್ನು ನಾನು ಏನು ಕಳುಹಿಸಿದ್ದೇ, ಅವುಗಳಲ್ಲಿ ಕೆಲವುಗಳ ಮೇಲೆ ಪ್ರಸ್ತಾಪಮಾಡುತ್ತೇನೆ. ಈ ಕಾಂಗ್ರೆಸ್ ಒಡೆದು ಹೋಗಿ ಎರಡು ಬಣ ಆದದ್ದು ಒಳ್ಳೆಯದು ಎಂದು ಕಾಣುತ್ತದೆ. ಏಕೆಂದರೆ ಎರಡು ಬಣದವರೂ ಈ ಸಮಾಜ ವಾದವನ್ನು ಅನುಸರಿಸುತ್ತೇವೆ ಅಂತ ಹೇಳಿ ಅವರೊಳಗೇ ಪೈಪೋಟಿ ನಡೆದಿದೆ. ಆ ಪೈಪೋಟಿಯಲ್ಲಿ ಈ ಸಮತಾವಾದ ಬೇಗ ಕಾರ್ಯಗತವಾಗುತ್ತದೆ ಎಂದು ನಮಗೆ ಅನಿಸುತ್ತಾ ಇದೆ. ಹಿಂದೆ ಸುರಾಸುರರ ಜಗಳದೊಳಗೆ ಅಮೃತ ಮಂಥನ ಆದಂತೆ ಅಮೃತ ಮಂಥನ ಈಗ ಆಗುತ್ತದೆ ಅಂತ ಆಶಾ ಭಾವನೆ ನನಗೆ ಮೂಡಲಿಕ್ಕೆ ಹತ್ತಿದೆ. ಏಕೆಂದರೆ ಸಮತಾವಾದ ಸಮಾಜವನ್ನು ಅಮಲಿನಲ್ಲಿ ತರಲು 10 ಅಂಶಗಳನ್ನು ಜಾರಿಗೆ ತರುತ್ತೇವೆ ಅಂತ ಇವರೂ ಹೇಳುತ್ತಾರೆ ಅವರೂ ಹೇಳುತ್ತಾರೆ.

ಆದಷ್ಟು ಬೇಗ ಅದು ಬರಲಿ, ಬೇಗ ಬರುತ್ತದೆ ಅಂತ ಆಶೆ ನಮ್ಮಲ್ಲಿ ಮೂಡಲಿಕ್ಕೆ ಹತ್ತಿದೆ. ಆದರೆ ಅದರ ಜೊತೆಯಲ್ಲಿ ನಿರಾಶೆಯೂ ಕೂಡ ಮೂಡಲಿಕ್ಕೆ ಹತ್ತಿದೆ, ಇವರ ಯಾದವೀ ಕಲಹದಲ್ಲಿ ಇಬ್ಬರೂ ಎಲ್ಲಿ ನಾಶವಾಗುತ್ತಾರೆಯೋ ಎಂಬ ಭಾವನೆಯೂ ಕೂಡ ಮೂಡುತ್ತಿದೆ. ಆದ್ದರಿಂದ ಪ್ರಜಾಸತ್ತೆಯ ಮೇಲೆ ವಿಶ್ವಾಸವಿರುವ, ಸಮಾಜವಾದ ತತ್ವ ಹೇಳುವಂತಹ ಯಾವ ಪಕ್ಷ ಇದೆಯೋ ಅದು ಬಲಯುತವಾಗಬೇಕು. ಮತ್ತು ಅದು ಆ ತತ್ವವನ್ನು ಕೃತಿಯಲ್ಲಿ ಇಳಿಸಲಿಕ್ಕೆ ಪ್ರಯತ್ನ ಮಾಡಿದರೆ ನಾನು ಬೆಂಬಲ ಕೊಡುತ್ತೇನೆ ಮತ್ತು ನಮ್ಮ ಪಕ್ಷದವರೂ ಕೂಡ ಬೆಂಬಲ ಕೊಡುತ್ತೇವೆ ಎಂದು ಹೇಳಿದ್ದಾರೆ. ಪೋಲರೈಸೇಷನ್ ಆಗಲಿಕ್ಕೆ ಇದರಿಂದ ಒಂದು ಅನುಕೂಲತೆ ಆಗುತ್ತದೆ. ಪೋಲರೈಸೇಷನ್ ಆಗಬೇಕು, ಹೆಚ್ಚು ಪಕ್ಷಗಳು ಉಳಿಯಬಾರದು, ಈಗ ನಮ್ಮ ರಾಷ್ಟ್ರದಲ್ಲಿ ಬೇರೆಬೇರೆ ಪಕ್ಷಗಳು ಇವೆ. ರಾಷ್ಟ್ರ ಹಿತಸಾಧಿಸುವಂತಹ, ರಾಷ್ಟ್ರದ ಶಕ್ತಿ ಬೆಳೆಸುವಂತಹ, ಪ್ರಜಾಸತ್ತೆಯಲ್ಲಿ ನಂಬಿಕೆ ಉಳ್ಳಂತಹ ಸಬಲವಾದ ಪಕ್ಷ ನಮ್ಮಲ್ಲಿ ಬೆಳೆಯಲಿ ಎಂದು ನಾನು ಹಾರೈಸುತ್ತೇನೆ. ಆ ರೀತಿ ಆಗಬೇಕು. ಎರಡು ಮೂರು ಪಕ್ಷಗಳಿಗಿಂತ ಹೆಚ್ಚು ಪಕ್ಷ ಉಳಿಯಬಾರದು ಮತ್ತು ಪ್ರಜಾಸತ್ತೆಯಲ್ಲಿ ವಿಶ್ವಾಸವುಳ್ಳಂತಹ ಪಕ್ಷಗಳು ಅದರಲ್ಲಿ ಇರಬೇಕು. ಆ ರೀತಿ ಆದರೆ ಮಾತ್ರ ನಮ್ಮ ರಾಷ್ಟ್ರಕ್ಕೆ ಹಿತವಾದೀತು ಎಂದು ನಾನು ಭಾವಿಸುತ್ತೇನೆ. ಆ ರೀತಿ ಮಾಡಲು ಎಲ್ಲರಿಗೂ ನಮ್ಮಲ್ಲಿ ಸುಜ್ಞಾನ ಬರಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ. ಇಷ್ಟು ಪೀಠಿಕೆ ಹೇಳಿ ಇನ್ನು ಇತರ ಕೆಲವು ವಿಚಾರಗಳನ್ನು ಪ್ರಸ್ತಾಪಮಾಡುತ್ತೇನೆ.

ನಮ್ಮ ರಾಜ್ಯದಲ್ಲಿ ಕಳೆದ 22 ವರ್ಷಗಳಿಂದ ಕಾಂಗ್ರೆಸ್ ಪಕ್ಷದವರು ಅಧಿಕಾರದಲ್ಲಿ ಇದ್ದಾರೆ. ನಮ್ಮ ರಾಜ್ಯದ ಅವಶ್ಯಕವಾದ ಸಮಸ್ಯೆಗಳು ಏನಿವೆ ಅವುಗಳನ್ನು ಇನ್ನೂ ಕೂಡ ಬಗೆಹರಿಸಿಲ್ಲ. ನಮಲ್ಲಿ 200 ಮೈಲಿ ಕರಾವಳಿ ಪ್ರದೇಶವುಂಟು, ಆದರೂಕೂಡ ಸರ್ವ ಋತು ಬಂದರು ಇನ್ನೂವರೆಗೂ ಆಗಿಲ್ಲ. ದಿವಂಗತ ಶ್ರೀನಿವಾಸ ಮಲ್ಯರವರು ಇದ್ದಾಗ ಅವರು ಪ್ರಯತ್ನ ಮಾಡಿದ್ದರ ಫಲವಾಗಿ ಮಂಗಳೂರು ಬಂದರಿನ ಕಾರ್ಯ ಈಗ ಸ್ವಲ್ಪ ಶುರುವಾಗಿದೆ. ಅದು ಸಹ ಕುಂಟುತ್ತಾ ಕೂರುತ್ತಾ ಸಾವಕಾಶವಾಗಿ ನಡೆದಿದೆ. ಸಾಮಾನ್ಯವಾಗಿ 20 ಕೋಟಿ ರೂಪಾಯಿ ಖರ್ಚು ಮಾಡಿದರೂ ಕೂಡ ಆ ಒಂದು ಸರ್ವಋತು ಬಂದರು ಆಗುತ್ತದೆಯೋ ಇಲ್ಲವೋ ಅನ್ನತಕ್ಕ ಅವಿಶ್ವಾಸ, ಒಂದು ಶಂಕೆ ನಮ್ಮಲ್ಲಿ ಬರಲಿಕ್ಕೆ ಹತ್ತಿದೆ; ನಮ್ಮಲ್ಲಿ ಮೂರು ಸರ್ವಋತು ಬಂದರು ಆಗುವಂತಹ ನೈಸರ್ಗಿಕ ಬಂದರುಗಳು ಇದ್ದರೂ ಕೂಡ ವೆಸ್ಟೆಡ್ ಇಂಟರೆಸ್ಟ್ ಇರತಕ್ಕವರು ಅವುಗಳನ್ನು ಮಾಡಲಿಕ್ಕೆ ಬಿಡುತ್ತಿಲ್ಲ. ಕಾರವಾರ ಉತ್ತಮವಾದ ಬಂದರು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದರೂ ಕೂಡ ಅದನ್ನು ಮಾಡಲಿಕ್ಕೆ ಆಗಿಲ್ಲ. ಅದೇ ರೀತಿ ಮಲ್ಪೆ ಸಹ ನೈಸರ್ಗಿಕ ವಾಣಿಜ್ಯ ಬಂದರು ಆಗಿದ್ದರೂ ಅದೂ ಕೂಡ ಆಗಿಲ್ಲ. ಯಾರೂ ತಪ್ಪು ತಿಳಿಯಬಾರದು, ಕೇಂದ್ರದಲ್ಲಿ ನಮ್ಮ ಪ್ರಭಾವ ಬೀಳುವುದಿಲ್ಲವೋ ಅಥವಾ ನಮ್ಮ ಮುಖಂಡರು ಸರಿಯಾಗಿ ಕೆಲಸ ಮಾಡುವುದಿಲ್ಲವೋ ಯಾವ ರೀತಿ ಅದು ಹಿಂದೆ ಬಿದ್ದಿದೆ ಎಂದು ಹೇಳಲಿಕ್ಕೆ ಶಕ್ಯವಿಲ್ಲವಾಗಿದೆ. ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು, ಕೇಂದ್ರದಲ್ಲಿ ಕಾಂಗ್ರೆಸ್ ಪ್ರೆಸಿಡೆಂಟರಾಗಿದ್ದರು, ಇಂದಿರಾಗಾಂಧಿಯವರನ್ನು ನಾನೇ ಪ್ರಧಾನ ಮಂತ್ರಿಯನ್ನಾಗಿ ಮಾಡಿದ್ದೇನೆ ಎಂದು ಅವರು ಹೇಳುತ್ತಾರೆ, ಇಷ್ಟಾದರೂ ಕೂಡ ನಮ್ಮ ಅವಶ್ಯಕತೆ ಏನಿದೆ ಅದರ ಬಗ್ಗೆ ಅವರು ಕೆಲಸ ಮಾಡಲಿಲ್ಲವಲ್ಲಾ ಎಂದು ನಮಗೆ ಅನಿಸುತ್ತಾ ಇದೆ. ಇದು ಏಕೆ ಆಗಲಿಲ್ಲ? ನಾವೇನು ಮಾಡಬೇಕು ? ಈ ದಿಶೆಯಲ್ಲಿ ನಮ್ಮ ಸರ್ಕಾರದವರು ಪ್ರಯತ್ನ ಮಾಡಬೇಕು. ಪರಿಶೀಲನೆ ಮಾಡಬೇಕು ಎಂದು ಸರ್ಕಾರದವರಿಗೆ ವಿನಂತಿಸಿಕೊಳ್ಳುತ್ತೇನೆ.

ಎರಡನೆಯದಾಗಿ ನಮ್ಮಲ್ಲಿ ರೈಲ್ವೆ ಸೌಕರ್ಯ ಅವಶ್ಯಕವಾಗಿ ಆಗಬೇಕಾಗಿದೆ; ಹುಬ್ಬಳ್ಳಿ ಕಾರವಾರ ರೈಲ್ವೆ ಆಗಬೇಕು ಇದು ಬಹಳ ಮಹತ್ವದ ಕೆಲಸವಾಗಿದೆ. ಕೇಂದ್ರಸರ್ಕಾರಕ್ಕೆ ಮನವಿ ಮಾಡಿದರೂ ಕೂಡ ಈ ದಿಶೆಯಲ್ಲಿ ಏನೇ ಪ್ರಯತ್ನ ಆದದ್ದು ಕಂಡುಬರುವುದಿಲ್ಲ. ಈ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಏನೊಂದು ವಿಷಯವನ್ನೂ ಪ್ರಸ್ತಾಪಮಾಡಿಲ್ಲ. ಈ ಎರಡು ಮಹತ್ವದ ವಿಷಯದಲ್ಲಿ ಸರ್ಕಾರ ವಿಫಲವಾಗಿದೆ, ಈ ದಿಶೆಯಲ್ಲಿ ಕೇಂದ್ರಸರ್ಕಾರದ ಲಕ್ಷ್ಯ ಎಳೆಯಬೇಕೆಂದು ನಾನು ಪ್ರಸ್ತಾಪಮಾಡಿದ್ದೇನೆ.

ಇನ್ನು ಮೂರನೆಯ ವಿಷಯ. ನಮ್ಮಲ್ಲಿ ಮೂರು ಪಂಚವಾರ್ಷಿಕ ಯೋಜನೆಗಳು ಆದವು. ಅನಂತರ ಎರಡು ವಾರ್ಷಿಕ ಯೋಜನೆ ಆಯಿತು. ಆದರೂ ಕೂಡ ಬಡವರು ಮತ್ತಷ್ಟು ಬಡವರಾಗುತ್ತಿದ್ದಾರೆ, ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ. ಇದನ್ನು ನಾವು ಗ್ರಾಮಾಂತರ ಪ್ರದೇಶದಲ್ಲಿ ಬಂದು ನೋಡಬೇಕು. ಒಂದು ರಾಜ್ಯವಾಗಲಿ, ಒಂದು ರಾಷ್ಟ್ರವಾಗಲಿ ಮುಂದೆ ಬರಬೇಕಾದರೆ ವ್ಯವಸಾಯ ವ್ಯಾಪಾರ ಮತ್ತು ಉದ್ದಿಮೆಗಳು ಬೆಳೆದರೆ ಮಾತ್ರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ನಮ್ಮ ಜಿಲ್ಲೆ ತೆಗೆದುಕೊಂಡರೆ ಅರಣ್ಯ ಕ್ಷೇತ್ರ ಶೇಕಡ 80 ರಷ್ಟು ಇದೆ,

(ಶ್ರೀ ಎಂ. ಎಂ. ಜಾಲಸಟಗಿ)

ವ್ಯವಸಾಯ ಕ್ಷೇತ್ರ ಶೇಕಡ 20 ರಂತೆ ಇದೆ. ಜನಸಂಖ್ಯೆ ಬೆಳೆಯುತ್ತಾ ಇದೆ. ಒಂದು ಕುಟುಂಬ ಇದ್ದಲ್ಲಿ 4 ಕುಟುಂಬ ಆಗಿದೆ. 3-4 ಎಕರೆ ಇರುವ ಸಣ್ಣ ಹಿಡುವಳಿ ಇರುವವರು ಅದರಲ್ಲಿ 4 ಭಾಗ ಮಾಡಿದರೆ ಮುಂದೆ ಆ ಪೀಳಿಗೆ ಜೀವನ ಮಾಡುವುದು ಹೇಗೆ? ಅದಕ್ಕೆ ಉದ್ಯೋಗ, ದಂಧೆ ಬೆಳೆದರೆ ಅನುಕೂಲವಾಗುತ್ತದೆ. ಉದ್ಯೋಗ, ದಂಧೆ ಬೆಳೆಯಲಿಕ್ಕೆ ನಮ್ಮ ಜಿಲ್ಲೆಯಲ್ಲಿ ನೈಸರ್ಗಿಕ ಸಂಪತ್ತು ಬೇಕಾದಷ್ಟು ಇದ್ದರೂ ಕೂಡ ಆ ಕಡೆಗೆ ಸರ್ಕಾರದವರು ಇನ್ನೂವರೆಗೂ ಲಕ್ಷ್ಯ ಕೊಟ್ಟಿಲ್ಲ, ಇದನ್ನು ವಿಷಾದದಿಂದ ಹೇಳಬೇಕಾಗಿದೆ.

7-00 P.M.

ನಮ್ಮಲ್ಲಿ ಅರಣ್ಯ ಹೆಚ್ಚಾಗಿದೆ. ಅಲ್ಲಿ ಒಂದು ರೆಯಾನ್ ಕಾರ್ಖಾನೆಯನ್ನು ಸ್ಥಾಪಿಸಲು ಒಬ್ಬ ದೊಡ್ಡ ಮನುಷ್ಯರನ್ನು ಕರೆದುಕೊಂಡು ಬಂದು ಕಲ್ಲು ಹಾಕಿಸಿದರು. ಅಲ್ಲಿ ಈಗ ಅಡವಿಯೇ ಬೆಳೆದಿದೆ. ಇದೇ ರೀತಿ ಗೋಕರ್ಣದ ಹತ್ತಿರ ಅಲ್ಯೂಮಿನಿಯಂ ಕಾರ್ಖಾನೆಗೆ ಬೇಕಾದಂಥ ಖನಿಜ ಬಹಳ ಸಿಕ್ಕುತ್ತದೆ. ಅಲ್ಲಿ ಅಲ್ಯೂಮಿನಿಯಂ ಕಾರ್ಖಾನೆ ಹಾಕುತ್ತೇವೆಂದು ಮಾನ್ಯ ಮಂತ್ರಿಗಳು ಬಂದಾಗಲೆಲ್ಲ ಹೇಳಿದ್ದರು. ಆದರೆ ಅದು ಬೆಳಗಾಂ ಹತ್ತಿರ ಹೋಯಿತು. ಕಾಸ್ಟಿಕ್ ಸೋಡಾ ಕಾರ್ಖಾನೆಗೆ ಕಳೆದ ಮೂರು ವರ್ಷದಿಂದ ಕೇಂದ್ರ ಸರ್ಕಾರದವರು ಪರವಾನಗಿ ಕೊಟ್ಟಿಲ್ಲವೆಂದು ಕೇಳುತ್ತೇನೆ. ಈ ರೀತಿ ನಮ್ಮಲ್ಲಿ ಕಾರ್ಖಾನೆಗಳನ್ನು ಮಾಡಲು ಅನುಕೂಲತೆ ಇದ್ದರೂ ಕೂಡ ಯಾವುದೇ ಉದ್ಯಮ ಬೆಳೆಯದೆ ಇದ್ದರೆ ಅಲ್ಲಿ ವ್ಯಾಪಾರ ಹೇಗೆ ಬೆಳೆಯುತ್ತದೆ? ನಮ್ಮಲ್ಲಿ ಬಂದರು, ಉದ್ಯಮ, ರೈಲ್ವೆ, ಯಾವುದೂ ಆಗಿಲ್ಲ.

ವ್ಯವಸಾಯಕ್ಕೆ ಅರಣ್ಯದಿಂದ ಒಂದು ಲಕ್ಷ ಎಕರೆ ಜಮೀನು ರಿಲೀಸ್ ಮಾಡುತ್ತೇವೆಂದು ಹೇಳಿದರು. ನಮ್ಮ ಜಿಲ್ಲೆಯಲ್ಲಿ ಒಂದು ಕಾಲದಲ್ಲಿ ಈಗ ವ್ಯವಸಾಯ ಮಾಡುವ ಕ್ಷೇತ್ರವಲ್ಲದೆ ಐದು ಲಕ್ಷ ಎಕರೆ ಸಾಗುವಳಿ ಜಮೀನಿತ್ತು. ಅದೆಲ್ಲ ಈಗ ಅಡವಿಯಾಗಿದೆ. ಐದು ಲಕ್ಷ ಎಕರೆ ರಿಲೀಸ್ ಮಾಡಿದರೂ 60 ಪರ್ಸೆಂಟ್ ಫಾರೆಸ್ಟ್ ಇರುತ್ತದೆ ಇದರಿಂದ ಬೇಕಾದಷ್ಟು ಜನರಿಗೆ ಉದ್ಯೋಗ, ವ್ಯವಸ್ಥೆ ಮಾಡುವುದಕ್ಕೆ ಅನುಕೂಲತೆ ಆಗುತ್ತಿದೆ. ನಾವೆಲ್ಲ ಒತ್ತಾಯ ಮಾಡಿದ ನಂತರ ಒಂದು ಲಕ್ಷ ಎಕರೆ ಬಿಡುಗಡೆ ಮಾಡುತ್ತೇವೆಂದು 1968ರ ಜನವರಿಯಲ್ಲಿ ರಾಜ್ಯಪಾಲರು ನಮ್ಮ ಭಾಗಕ್ಕೆ ಬಂದಿದ್ದಾಗ ಮಾನ್ಯ ಅರ್ಥ ಮಂತ್ರಿಗಳು ಘೋಷಣೆ ಮಾಡಿದರು. ಆದರೆ ಒಂದು ಲಕ್ಷ ಎಕರೆ ರಿಲೀಸ್ ಮಾಡಬೇಕಾದರೆ ಪ್ರತಿ ವರ್ಷ 10 ಸಾವಿರ ಎಕರೆಯನ್ನು ರಿಲೀಸ್ ಮಾಡುತ್ತೇವೆಂದು ಹೇಳಿದ್ದಾರೆ. ಈ 10 ಸಾವಿರ ಎಕರೆಯನ್ನು ಹರಿಜನ ಗಿರಿಜನರಿಗೆ, ಭೂಮಿ ಇಲ್ಲದವರಿಗೆ, ಕೂಲಿಗಾರರಿಗೆ ಕೊಡಬೇಕೆಂದು ಲ್ಯಾಂಡ್ ರೆವೆನ್ಯೂ ರೂಲ್ಸಿನಲ್ಲಿದೆ. ಈ ರೀತಿ ಕೊಟ್ಟರೂ ಆ ಜಮೀನಿನಲ್ಲಿ ದೊಡ್ಡ ದೊಡ್ಡ ಮರಗಳು ಬೆಳೆದಿರುವುದನ್ನು ತೆಗೆದು ಸಾಗುವಳಿ ಮಾಡುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಪ್ರತಿವರ್ಷ ಬಿಡುಗಡೆ ಮಾಡುವ 10 ಸಾವಿರ ಎಕರೆ ಜಮೀನಿನಲ್ಲಿರುವ ಅರಣ್ಯವನ್ನು ಕ್ಲಿಯರ್ ಮಾಡಿ ಬುಲ್‌ಡೋಜರ್‌ನಿಂದ ಸಮಪಾತಳಿ ಮಾಡಿ ಒಂದೊಂದು ಕುಟುಂಬಕ್ಕೆ ಐದು ಎಕರೆಯಂತೆ ಸಾಗುವಳಿಗೆ ಕೊಟ್ಟರೆ ಆ ಜನರು ಅಲ್ಲಿ ನೆಲೆಸಿ ಚಲೋ ವ್ಯವಸಾಯ ಮಾಡುತ್ತಾರೆ. ಇಲ್ಲದೆ ಇದ್ದರೆ ಅರಣ್ಯ ಜಮೀನನ್ನು ಹಾಗೆಯೇ ಕೊಡಬೇಕೆಂದು ಮಾಡಿದರೆ, ಪ್ರತ್ಯಕ್ಷವಾಗಿ ಅವರಿಗೆ ಜಮೀನು ಸಿಕ್ಕದೆ ಬೇರೆ ವೆಸ್ಟೆಡ್ ಇಂಟರೆಸ್ಟ್ಸ್ ಕೈಗೆ ಹೋಗುತ್ತದೆ. ಹಾಗೆ ಆಗದಂತೆ, ಪ್ರತಿಯೊಬ್ಬರಿಗೂ ಜಮೀನು ಸಿಕ್ಕುವುದಕ್ಕೆ, ಅವರ ಜೀವನ ಸುಗಮವಾಗಿ ನಡೆಯುವುದಕ್ಕೆ, ಹಸಿರು ಕ್ರಾಂತಿಯಾಗಲಿಕ್ಕೆ, ಸರ್ಕಾರದವರು ಪ್ರತಿ ವರ್ಷ 10 ಸಾವಿರ ಎಕರೆಯನ್ನು ಹರಿಜನ ಗಿರಿಜನರಿಗೆ, ಭೂ ಹೀನ ರೈತರಿಗೆ, ಕಾರ್ಮಿಕರಿಗೆ, ಕೊಡುವುದಾಗಿ ವ್ಯವಸ್ಥೆ ಮಾಡಿದರೆ ಒಳ್ಳೆಯದಾಗುತ್ತದೆ. ಇದರಿಂದ ಸರ್ಕಾರಕ್ಕೆ ಹೆಚ್ಚು ಖರ್ಚಾಗುವುದು ಬೇಡ, ಇದಕ್ಕೆ ಖರ್ಚಾಗುವ ಹಣವನ್ನು 10 ವರ್ಷದ ನಂತರ 20 ವರ್ಷದೊಳಗಾಗಿ ಸರ್ಕಾರಕ್ಕೆ ಪುನಃ ಬರುವಂತೆ ವ್ಯವಸ್ಥೆ ಮಾಡಿಕೊಂಡರೆ ನಿಜವಾಗಿ ಬಡ ಜನರ ಮತ್ತು ರೈತರ ಕಲ್ಯಾಣ ಮಾಡಿದಂತಾಗುತ್ತದೆ. ಅಲ್ಲದೆ ಉತ್ತರ ಕನ್ನಡ ಜಿಲ್ಲೆ ಸಹ ಬತ್ತದ ಕಣಜವಾಗುತ್ತದೆ.

ಭೂಸುಧಾರಣೆಯನ್ನು ಅಮಲಿನಲ್ಲಿ ತರಬೇಕೆಂದು ಮಾಡಿದ್ದಾರೆ. ಮೈಸೂರು ಭೂಸುಧಾರಣೆಯಿಂದ ಮುಂಬೈ ಕರ್ಣಾಟಕದ ನಾಲ್ಕು ಜಿಲ್ಲೆಯವರಿಗೆ ಬಹಳ ತೊಂದರೆಯಾಗುತ್ತದೆ. ನಮ್ಮಲ್ಲಿ ಎಕರೆಗೆ 20 ರೂಪಾಯಿನಂತೆ ಗೇಣಿ ಇದ್ದದ್ದು ಈಗ 100-150 ರೂಪಾಯಿ ಆಗಿದೆ. ಇದರಿಂದ ರೈತರಲ್ಲಿ ಸಂತೋಷವಾಗಿದೆ. ಲೀವ್ಹಿ ಕೊಡುವ ಜವಾಬ್ದಾರಿ ರೈತರ ಮೇಲೆ ಇದ್ದುದನ್ನು ಈಗ ಭೂ ಮಾಲೀಕರ ಮೇಲೆ ಹಾಕಿದ್ದಾರೆ. ಕಳೆದ ನಾಲ್ಕೈದು ವರ್ಷಗಳಿಂದ ಗೇಣಿ ಕೊಡದೆ ಇರುವಂಥ

ಅರ್ಜಿ ವಿಚಾರಗಳು ಅನೇಕವಿವೆ. ನಮ್ಮ ಜಿಲ್ಲೆಯ ಬಗ್ಗೆ ಮಾತ್ರ ಹೇಳುವುದಾದರೆ ಅಜಮಾಸ 50 ಸಾವಿರ ಅರ್ಜಿಗಳು ನಿಕಾಲೆ ಆಗದೆ ಉಳಿದಿವೆ. ಇವು ಬೇಗ ನಿಕಾಲೆಯಾಗುವಂತೆ ಮಾಡಬೇಕು. ಭೂಸುಧಾರಣೆಯನ್ನು ಮಾಡುವಂಥ ಉದ್ದೇಶ ಇದ್ದರೆ ಅದಕ್ಕಾಗಿ ಭೂಸುಧಾರಣೆಯನ್ನು ಜಾಗ್ರತೆಯಾಗಿ ಅಮಲಿನಲ್ಲಿ ತಂದು ಯಾರು ಭೂಮಿಯನ್ನು ಸಾಗುವಳಿ ಮಾಡುತ್ತಾರೆಯೋ ಅವರೇ ಅದರ ಮಾಲೀಕರಾಗುವಂತೆ ವ್ಯವಸ್ಥೆ ಮಾಡಬೇಕು. ಆ ದಿಸೆಯಲ್ಲಿ ಪ್ರಯತ್ನ ಮಾಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಅದು ಕೃತಿಗೆ ಇಳಿಯಬೇಕು.

ನಮ್ಮ ಜಿಲ್ಲೆಯಲ್ಲಿ ಒಂದು ಲಕ್ಷ ಎಕರೆ ಅರಣ್ಯ ಜಮೀನನ್ನು ಸಾಗುವಳಿ ಮಾಡುವುದಕ್ಕೆ ಬಿಡುಗಡೆ ಮಾಡಿದರೆ ನಮ್ಮ ಜಿಲ್ಲೆಯ ಮಟ್ಟಿಗೆ ಒಡೆಯ ಮತ್ತು ಒಕ್ಕಲು ಎನ್ನುವ ಸಮಸ್ಯೆ ಪರಿಹಾರವಾಗುತ್ತದೆ. ಕೂಡಲೇ ಭೂ ಸುಧಾರಣಾ ಕಾಯದೆ ಅಮಲಿನಲ್ಲಿ ಬರುವಂತೆ ಮಾಡಬೇಕು ಮತ್ತು ಅರಣ್ಯ ಭೂಮಿ ಪ್ರತಿಯೊಬ್ಬ ಹರಿಜನಗಿರಿಜನರಿಗೂ, ಭೂ ಹೀನರು ಮತ್ತು ವ್ಯವಸಾಯ ಕಾರ್ಮಿಕರಿಗೂ ಸಿಕ್ಕುವಂತೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮಹಾಜನ್ ಕಮಿಷನ್ ವರದಿ ಕೂಡಲೇ ಅಮಲಿನಲ್ಲಿ ಬರುವಂತೆ ಮಾಡುವುದಾಗಿ ಸರ್ಕಾರದವರು ಹೇಳಿದ್ದಾರೆ. ಇದರ ಬಗ್ಗೆ ಕೂಡ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

ನಮ್ಮಲ್ಲಿ ಉಗ್ರಾಣಿಗಳು ಎಂದು ಇದ್ದಾರೆ. ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸುತ್ತಿಲ್ಲ. ಅವರು ಇಡೀ ದಿವಸ ಕೆಲಸ ಮಾಡಬೇಕು. ಕೆಲಸಮಾಡಿದ್ದಕ್ಕೆ ಶ್ಯಾನುಭೋಗರು ಸರ್ಟಿಫಿಕೇಟ್ ಕೊಡದೆ ಇದ್ದರೆ ಅವರಿಗೆ ಪಗಾರ ಸಿಕ್ಕುವುದಿಲ್ಲ. ಅವರಿಗೆ ಪಗಾರ ಅಲೋಯನ್ಸ್ ಎಲ್ಲ ಸೇರಿ 36 ರೂಪಾಯಿ ಮಾತ್ರ ಸಿಕ್ಕುತ್ತದೆ. ಅವರು ಇಡೀ ದಿವಸ ಕೆಲಸ ಮಾಡಬೇಕಾಗಿರುತ್ತದೆ ಮತ್ತು ಹಳ್ಳಿಯಿಂದ ಷಹರಿಗೆ ಬರಬೇಕಾದರೆ ಕೈಯಿಂದ ಖರ್ಚು ಮಾಡಿಕೊಂಡು ಬರಬೇಕು. ಅವರನ್ನು 4ನೇ ವರ್ಗದ ನೌಕರರು ಎಂದು ಪರಿಗಣನೆ ಮಾಡಿ ಅವರಿಗೆ ಕನಿಷ್ಟ ವೇತನ ಕೊಡುವಂತೆ ಸರ್ಕಾರದವರು ಮಾಡಬೇಕು. ಈ ಬಗ್ಗೆ ಇವರು ಸಾವಿರಾರು ಅರ್ಜಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆದರೆ ಇವರು ತ್ರಿಶಂಕು ಸ್ಥಿತಿಯಲ್ಲಿಯೇ ಇದ್ದಾರೆ. ಇವರನ್ನೂ ಸಹ ಸರಕಾರಿ ನೌಕರರು ಎಂದು ಪರಿಗಣನೆ ಮಾಡಿ ಈ ಬಡವರ ಮೇಲೆ ಅನುಕಂಪ ಮಾಡಿ ಅನುಕೂಲ ಮಾಡಿಕೊಡಬೇಕು ಎಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಕೆಲವು ಪ್ರೈಮರಿ ಹೆಲ್ತ್ ಸೆಂಟರ್ಸ್ ಮಾಡಿದ್ದಾರೆ. ಈ ಹೆಲ್ತ್ ಸೆಂಟರುಗಳಲ್ಲಿ ಔಷಧವೇ ಇರುವುದಿಲ್ಲ. ಎರಡು ಟಿಂಚರ್ಸ್ ಮಾತ್ರ ಇರುತ್ತವೆ. ಇಂಜೆಕ್ಷನ್ ಟ್ಯೂಬ್ಸ್ ಇರುವುದಿಲ್ಲ ಔಷಧಗಳು ಇರುವುದಿಲ್ಲ. ಉಪಕರಣಗಳು ಇರುವುದಿಲ್ಲ. ಈ ಹೆಲ್ತ್ ಸೆಂಟರ್ಸ್‌ಗಳಿಂದ ಬಡವರಿಗೆ ದೊರೆಯಬೇಕಾದ ಸಹಾಯ ದೊರೆಯುತ್ತಿಲ್ಲ. ಆದುದರಿಂದ ಪ್ರೈಮರಿ ಹೆಲ್ತ್ ಸೆಂಟರ್ಸ್‌ಗಳಿಗೆ ಬೇಕಾಗಿರುವ ಔಷಧಿಗಳನ್ನು, ಅಗತ್ಯವಾದ ಆಕ್ಸೆಸರೀಜ್‌ಗಳನ್ನು ಮೊದಲು ದಯಪಾಲಿಸಬೇಕು ಎಂದು ಸಲಹೆ ಮಾಡುತ್ತೇನೆ.

ಭಟಕಳ ಟೌನಿನಲ್ಲಿ ಡ್ರೇನೇಜ್ ಆಗಬೇಕು ಎನ್ನುವುದಕ್ಕೆ ಈಗಾಗಲೇ ಸಂಬಂಧಪಟ್ಟವರು ಅದಕ್ಕೆ ಬೇಕಾದ ದುಡ್ಡು ಜಮಾ ಕೂಡ ಮಾಡಿದ್ದಾರೆ. ಇದು ಬಹಳ ಅಗತ್ಯವಾಗಿ ಆಗಬೇಕಾಗಿದೆ. ಯಾಕಂದರೆ ಈ ಭಾಗದಲ್ಲಿ ಅನೇಕಾಲು ರೋಗ ಪಸರಿಸಲಿಕ್ಕೆ ಹತ್ತಿದೆ. ಜನರಿಗೆ ಬಹಳ ತೊಂದರೆಯಾಗಿದೆ. ಇದನ್ನು ಆದಷ್ಟು ಜಾಗ್ರತೆ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಪಶುಸಂಗೋಪನೆ ವಿಚಾರದಲ್ಲಿ ನಮ್ಮ ಜಿಲ್ಲೆಗೆ ಅನುಕೂಲತೆ ಮಾಡಿ ಕೊಟ್ಟಿಲ್ಲ. ಇದಕ್ಕೆ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಹಾಲಿನ ಕೊರತೆ ಬಹಳ ಇದೆ. ನಮ್ಮ ಜಿಲ್ಲೆಯಲ್ಲಿ ಹಾಲಿನ ಪೂರೈಕೆ ಬಗ್ಗೆ ಹೆಚ್ಚು ಲಕ್ಷ ಕೊಡಲೇಬೇಕು. ಪಶುಸಂಗೋಪನ ಮಂತ್ರಿಗಳು ಬರೀ ಧಾರವಾಡ ಜಿಲ್ಲೆಯನ್ನು ಅಷ್ಟೇ ನೋಡದೆ ಪಶ್ಚಿಮದ ಕಡೆ ಅದರಲ್ಲೂ ನಮ್ಮ ಜಿಲ್ಲೆಯ ಕಡೆಗೆ ಸ್ವಲ್ಪ ಹೆಚ್ಚು ಲಕ್ಷ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಫಾರೆಸ್ಟ್ ಸಮಸ್ಯೆ ಬಗ್ಗೆ ಸ್ವಲ್ಪ ಹೇಳಬೇಕಾಗಿತ್ತು. ಈಗ ಕಾಲಾವಕಾಶವಿಲ್ಲ. ಇನ್ನೊಂದು ಸಂದರ್ಭ ಉಪಯೋಗಿಸಿಕೊಂಡು ಹೇಳಲು ಬಯಸುತ್ತೇನೆ.

MR. SPEAKER.—There are three holidays. We are meeting on Tuesday. Shall we meet at 12 O'clock ?

ಶ್ರೀ ಎಲ್. ಶ್ರೀಕಂಠಯ್ಯ.—ಮಂಗಳವಾರ ಮೈಸೂರಿನಲ್ಲಿ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಇದೆ. ಅದಕ್ಕಾಗಿ ವಿಧಾನ ಪರಿಷತ್ತು ಬೆಳಿಗ್ಗೆ ಕೂಡುತ್ತಾರೆ. ನಮಗೂ ಆ ಸೌಲಭ್ಯ ಕೊಡುವುದಕ್ಕಾಗಿ ಅಸೆಂಬ್ಲಿ ಮೀಟಿಂಗ್ ಮಂಗಳವಾರ ಬೆಳಿಗ್ಗೆ ಇಡಬೇಕು ಎಂದು ಸೂಚಿಸುತ್ತೇನೆ.

Sri K. PUTTASWAMY.—Sir, this august House represents the State. It cannot go on adjusting to the time of other bodies.

Mr. SPEAKER.—Now the House will rise and meet again on next Tuesday at 1 P.M.

The House adjourned at Fifteen Minutes past Seven of the Clock to meet again at One of the Clock on Tuesday, 27th January 1970.

WD 14612—GPB—500—2.7-'70